# ನೇಸರು

ತಿಂಗಳೋಲೆ

ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVI - 1-2 ಜನವರಿ-ಫೆಬ್ರವರಿ 1998


## ಈ ಸಂಚಿಕೆಯಲ್ಲಿ


| | | |
|---|---|---|
| ಇದು ನಮ್ಮ ಪ್ರಾಚೀನ ಭಾರತ -7 | ● ಎಸ್. ಆನಂದಶಾಸ್ತ್ರಿ, ಮೈಸೂರು | 2 |
| ಹೊಸ ವರ್ಷಕ್ಕೆ ಸ್ವಾಗತ | ● ಹೆಚ್. ವಿ. ಜನಾರ್ಧನ | 5 |
| ದ್ರೌಪದೀ ಸಮೀಕ್ಷೆ - ಪುಸ್ತಕ ವಿಮರ್ಶೆ | ● ಗಿರಿಜಾ ಶಾಸ್ತ್ರಿ | 5 |
| ಕನ್ನಡ ಕಲಾಕೇಂದ್ರದ 39ನೇ ವಾರ್ಷಿಕೋತ್ಸವ | ● ರಮಾಕೃಷ್ಣ | 7 |
| ಸತ್‌ಸಂಗದ ಕರ್ನಾಟಕ ಪ್ರವಾಸ | ● ಜಯಮ್ಮ ಸಿ.ಕೆ. ಎಸ್. ರಾವ್ | 8 |
| ಅಸೋಸಿಯೇಶನ್ನಿನಲ್ಲಿ ನಡೆದ ಕಾರ್ಯಕ್ರಮಗಳು | | 10 |
| ಸಂಮೋಹಿನಿ ಚಿಕಿತ್ಸೆ - 18 | ● ಡಾ। ಉಷಾರಾವ್ | 12 |
| ಆಪತ್ತುಗಳು | ● ವಾಸುದೇವ ಕಾಣೆಮಾರ್ | 14 |
| ಪೀಳಿಗೆಗಳಲ್ಲಿ ಅಂತರ - Generation Gap | ● ಜಿ. ವಿ. ರಾವ್ | 15 |



**The Mysore Association, Mumbai**

393, Bhaudaji Road, Matunga, Mumbai-400 019.

Tel.: 402 46 47 ● Grams: "KARUNADU"

# ಇದು ನಮ್ಮ ಪ್ರಾಚೀನ ಭಾರತ -7

● ಎಸ್. ಆನಂದಶಾಸ್ತ್ರಿ, ಮೈಸೂರು

ಕ್ರಿಸ್ತಪೂರ್ವ 6ನೇ ಶತಮಾನ. ಈಗಿನ ಬಿಹಾರ ಮತ್ತು ಉತ್ತರ ಪ್ರದೇಶ (ಆಗಿನ ಮಧ್ಯದೇಶ) ದಲ್ಲಿ ಭಗವಾನ್ ಬುದ್ಧನು ತನ್ನ ಜ್ಞಾನೋದಯವಾದ ನಂತರ ಅತಿ ಹುಮ್ಮಸ್ಸಿನಿಂದ ತನ್ನ ಅರಿವನ್ನು ಜನರಲ್ಲಿ ಹಂಚಿಕೊಳ್ಳುತ್ತಿದ್ದ ದಿನಗಳವು. ಬುದ್ಧನ ಹಿರಿಯ ಸಮಕಾಲೀನನಾದ ಭಗವಾನ್ ಮಹಾವೀರನಾಗಲೇ ಜೈನ ಧರ್ಮಪ್ರಸಾರದಲ್ಲಿ ಮುಂದಿದ್ದ ಕಾಲ.

ಆಗ ನಮ್ಮ ಭಾರತದೇಶದಲ್ಲಿ ಸಂಸಾರಿಗಳು ತಂಡ ತಂಡವಾಗಿ ಸನ್ಯಾಸಿಗಳಾಗುವ ಹುಚ್ಚು ಹತ್ತಿತ್ತು. ಅವರುಗಳ ಗುಂಪು ಗುಂಪೇ ದೇಶ ಪರ್ಯಟನ ಮಾಡುತ್ತಿತ್ತು. ವೈದಿಕ ಧರ್ಮವು ಆಗ ಸನ್ಯಾಸ ಧರ್ಮವನ್ನು ಅಷ್ಟು ಅಂಗೀಕರಿಸಿರಲಿಲ್ಲ. ಬೌದ್ಧ ಮತ್ತು ಜೈನಧರ್ಮ ಸಂಪರ್ಕದಿಂದಲೇ ಹಿಂದೂ ಧರ್ಮದಲ್ಲಿ ಸನ್ಯಾಸದ ಆವಿರ್ಭಾವವಾಯಿತೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಗೃಹಸ್ಥರನ್ನು ಬಿಟ್ಟು ಸನ್ಯಾಸಿಗಳ ತಂಡಗಳಲ್ಲಿ ಸಾವಿರಾರು ಮಂದಿ ಇರುತ್ತಿದ್ದರಂತೆ. ತಮ್ಮ ಅನುಯಾಯಿಗಳ ಸಂಖ್ಯೆಯನ್ನು ಏರಿಸುವ ಉತ್ಸಾಹದಲ್ಲಿ ಉತ್ಪ್ರೇಕ್ಷೆ ಇದ್ದರೂ ಪ್ರತಿ ಗುರುವಿನ ಹಿಂಬಾಲಕರು ಬಹಳವಿರುತ್ತಿದ್ದರು. ಜನಸಾಮಾನ್ಯರಲ್ಲದೆ ಸಾಹುಕಾರರು, ಶ್ರೇಷ್ಠಿಗಳು, ವರ್ತಕರು, ವಿದೇಶವ್ಯಾಪಾರ ಮಾಡುವವರು ಈ ಸಂಘಗಳಿಗೆ ಆಶ್ರಯದಾತರಾಗಿದ್ದ ಸುಭಿಕ್ಷ ಕಾಲವದು. ಈಗಿನ ಇಂಡೋನೇಷಿಯಾದ ಜಾವಾ (ಯವದ್ವೀಪ) ಸುಮಾತ್ರ (ಸುವರ್ಣದ್ವೀಪ) ಇತ್ಯಾದಿ ದೇಶಗಳೊಡನೆ ವ್ಯಾಪಾರಕ್ಕಾಗಿ ಹಡುಗುಗಳನ್ನು ಕಳಿಸಿ ಕೇವಲ ಧರ್ಮಪ್ರಸಾರಕ್ಕೇ ಈ ಹಣವನ್ನು ವಿನಿಯೋಗಿಸುತ್ತೇವೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ವ್ಯಾಪಾರಗಾರರೂ ಇದ್ದರು. ಈ ರೀತಿ ಸುಖಜೀವನ ನಡೆಸುತ್ತಿದ್ದುದನ್ನು ನೋಡಿ ಆಸೆಯಿಂದ ಸಂಸಾರವನ್ನು ತ್ಯಜಿಸಿ ಭಿಕ್ಷುಗಳಾಗಿ ಬಂದು ಸಂಘದಲ್ಲಿ ವಿಷಯಾಸಕ್ತತೆಗೆ ಅವಕಾಶವಿಲ್ಲದೆ ಸುಸ್ತಾಗಿ ವಾಪಾಸಾದವರರೂ ಉಂಟು.

ಆ ಕಾಲದಲ್ಲಿ ಬೌದ್ಧಧರ್ಮದಂತೆಯೇ ಬೇರೆ ಆರು ಪರಧರ್ಮೀಯ ಪಂಥಗಳಿದ್ದು ಮಸ್ಕರಿನ್ ಗೋಸಾಲ, ಪೂರ್ಣ ಕಶ್ಯಪ, ಅಜಿತಕೇಶ ಕಂಬಲಿನ, ಕಾಕುದ ಕಾತ್ಯಾಯನ, ನಿರ್ಗ್ರಂಥ ಜ್ಞಾತಪುತ್ರ (ಜೈನ ಮಹಾವೀರ) ಮತ್ತು ಪರಿವ್ರಾಜಕ ಸಂಜಯ ವೈರಾಟಿಪುತ್ರ ಅವಕ್ಕೆ ಗುರುಗಳಾಗಿದ್ದರು. ಆಜೀವಕ ಪಂಥದ ಗೋಶಾಲ "ಹಣೆಬರಹ" ನಂಬುವವನು. ಎಲ್ಲಾ ಪೂರ್ವದಿಂದ ಬಂದ ನಮ್ಮ ಕರ್ಮದ ಹೊರೆ ಮೊದಲೇ ನಿರ್ಧಾರಿತವಾಗಿರುವುದರಿಂದ ನಮ್ಮ ಪ್ರಯತ್ನ ಶೀಲತ್ವಕ್ಕೆ ಅರ್ಥವಿಲ್ಲ. ಆದರೆ ಜನ್ಮಾಂತರಗಳು ಮಾತ್ರ ನಮ್ಮ `ಸಂಸಾರ ತುದಿ' ಮಾಡುತ್ತವೆ ಎಂದು ತರ್ಕಿಸುತ್ತಿದ್ದ. ಭಗವಾನ್ ಬುದ್ಧನು ಮಾತ್ರ ಅವರಲ್ಲಿ ಎಲ್ಲರಿಗಿಂತ ಗೋಶಾಲನ ತತ್ವಗಳಿಂದ ದೂರವಿರಿ. ಎಂದು ಎಚ್ಚರಿಸುವಂತಾಯಿತು. ನಿರ್ಗ್ರಂಥ ಜ್ಞಾತಪುತ್ರ (ಜೈನ ಮಹಾವೀರ) ಬಂಧನ ಮುಕ್ತರಾಗಿ ಆತ್ಮ ನಿರ್ಭರತೆಯಿಂದಲೇ ಎಲ್ಲಾ ಪ್ರಾಪಂಚಿಕ ದುಃಖಗಳಿಂದ ಪಾರಾದ ನಂತರ ಈ ಸಂಸಾರ ಚಕ್ರದಿಂದ ಮುಕ್ತಿ ಸಾಧ್ಯ ಎಂದು ಉಪದೇಶಿಸುತ್ತಿದ್ದನು.

ಸಂಜಯನಂತಹ ಪರಿವ್ರಾಜಕರು ಸದಾ ಪರ್ಯಟನೆಯಲ್ಲಿದ್ದು ಜನರನ್ನು ಮಾತು, ವಾದಕ್ಕೆ

## ಬಡವಾದ 'ನೇಸರು' ಬಳಗ

ಕಳೆದ ಒಂದು ವರ್ಷದಿಂದಲೂ ಸತತವಾಗಿ ಓದುಗರಿಗೆ "ನಮ್ಮ ಪ್ರಾಚೀನ ಭಾರತ"ದ ಭವ್ಯತೆಯ ಪರಿಚಯ ಮಾಡಿಕೊಡುತ್ತ ಬಂದಿದ್ದ ಶ್ರೀಯುತ ಆನಂದ ಶಾಸ್ತ್ರಿಯವರು ಅತ್ಯಂತ ದಾರುಣವಾದ ಪರಿಸ್ಥಿತಿಯಲ್ಲಿ ನಮ್ಮನ್ನು ಬಿಟ್ಟು ಅಗಲಿರುತ್ತಾರೆ. ಬರೋಡಾಕ್ಕೆ ತಮ್ಮ ಮೊಮ್ಮಗನ ನಾಮಕರಣಕ್ಕೆಂದು ಹೋಗಿದ್ದ ಆನಂದ ಶಾಸ್ತ್ರಿಗಳು ತಾ. 4-1-98ರಂದು ಅಲ್ಲಿಂದ ತಮ್ಮ ಪತ್ನಿಯ ಜೊತೆ ರೈಲಿನಲ್ಲಿ ಬೆಂಗಳೂರಿಗೆ ಮರಳುತ್ತಿದ್ದರು. ತಾ. 5-1-98ರ ಬೆಳಗಿನಲ್ಲಿ ಅವರು ರೈಲಿನ ಟಾಯಲೆಟ್ ಒಂದರಲ್ಲಿ ಪಾರ್ಶವಾಯುವಿಗೆ ತುತ್ತಾದರು. ಅವರ ಪತ್ನಿ ಎಷ್ಟೇ ಕೇಳಿಕೊಂಡರೂ ರೈಲ್ವೆ ಸಿಬ್ಬಂದಿ ಸಹಕರಿಸದ ಕಾರಣ ಅವರು ರೈಲಿನ ಟಾಯಲೆಟ್ ಒಳಗೆ ಸಿಕ್ಕಿಹಾಕಿಕೊಂಡದ್ದು ಮೂರುದಿನಗಳವರೆಗೆ ಯಾರಿಗೂ ಗೊತ್ತಾಗಲೇ ಇಲ್ಲ. ರೈಲನ್ನು ಬೆಂಗಳೂರಿನಲ್ಲಿ ಯಾರ್ಡ್‌ಗೆ ಒಯ್ದು ಬಿಟ್ಟದ್ದರಿಂದ ಕಡೆಗೆ ಪುನಃ ಕ್ಲೀನ್ ಮಾಡಲು ಬಂದ ಸಿಬ್ಬಂಧಿ ಬಾಗಿಲು ಒಡೆದು ಅವರನ್ನು ಆತಂತ್ರ ಸ್ಥಿತಿಯಲ್ಲಿ ಆಸ್ಪತ್ರೆಗೆ ಸೇರಿಸಿದರು. ಹಾಗೂ ಒಂದು ವಾರ ಅವರು ಜೀವನ್ಮರಣದುಯ್ಯಾಲೆಯಲ್ಲಿ ತೂಗಿ ಕಡೆಗೆ ತಾ. 17-1-98ರಂದು ಬಂಧು-ಬಳಗವನ್ನೆಲ್ಲಾ ಅಗಲಿ ಹೊರಟು ಹೋದರು.



ಆಗಾಗ್ಗೆ ಗಂಭೀರ ಲೇಖನಗಳನ್ನಲ್ಲದೆ ಹಾಸ್ಯ ಲೇಖನಗಳನ್ನೂ ಬರೆದು ಕೊಟ್ಟಿದ್ದರು. ಈ ಸಂಚಿಕೆಯಲ್ಲಿ ಪ್ರಕಟವಾಗುತ್ತಿರುವ "ನಮ್ಮ ಪ್ರಾಚೀನ ಭಾರತ" ಮಾಲೆಯಲ್ಲಿನ ಲೇಖನ ಅವರು ಸಾಯುವ ಮೊದಲೇ ಕಳಿಸಿ ಕೊಟ್ಟಿದ್ದರು. ಇನ್ನೊಂದು ಲೇಖನ ಮುಂದಿನ ಸಂಚಿಕೆಯಲ್ಲಿ ಪ್ರಕಟವಾಗಲಿದೆ. ಇವರ ಅಕಾಲ ಮರಣದಿಂದ ಈ ಲೇಖನ ಮಾಲೆ ಅಪೂರ್ಣವಾಗಿ ನಿಲ್ಲಬೇಕಾದ ಪರಿಸ್ಥಿತಿಯುಂಟಾಗಿದೆ.

ಆನಂದ ಶಾಸ್ತ್ರಿಗಳು ಬಹಳ ವರ್ಷಗಳಿಂದಲೂ ಅಸೋಸಿಯೇಶನ್ನಿನ ಸದಸ್ಯರಾಗಿದ್ದರು. `ನೇಸರು'ವಿನ ಬಗೆಗೆ ಬಹಳ ಅಭಿಮಾನವಿಟ್ಟುಕೊಂಡಿದ್ದರು.

ಮೂಲತಃ ಮೈಸೂರಿನವರಾದ ಆನಂದ ಶಾಸ್ತ್ರಿಯುವರು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಶ್ರೀ ಶಿವರಾಮಶಾಸ್ತ್ರಿಗಳ ಮಕ್ಕಳು. ಮೈಸೂರಿನಲ್ಲಿ Indologyಯಲ್ಲಿ M.A. ಮಾಡಿದ ನಂತರ ದೆಹಲಿಯಲ್ಲಿ Diploma in Archeology ಮಾಡಿಕೊಂಡರು.

ಆನಂದ ಶಾಸ್ತ್ರಿಯವರು "Archeological Surey of India"ಗೆ 30 ಕ್ಕೂ ಹೆಚ್ಚು ವರ್ಷಗಳು ಸೇವೆ ಸಲ್ಲಿಸಿದ್ದಾರೆ. ತಮ್ಮ ಸೇವಾವೃತ್ತಿಯಲ್ಲಿ ಭಾರತದ ಉದ್ದಗಲಕ್ಕೂ ಪ್ರವಾಸ ಮಾಡಿರುತ್ತಾರೆ. ತಮ್ಮ ಸೇವಾಅವಧಿಯಲ್ಲಿ ಅವರು ಮೂರು ವರ್ಷ ಮುಂಬಯಿಯಲ್ಲೂ ಇದ್ದರು. ತಮ್ಮ ಸೇವಾ ವೃತ್ತಿ ಯಲ್ಲಿ ಅವರು ಅನೇಕ ಉತ್ಖನನಗಳಲ್ಲಿ ಭಾಗವಹಿಸಿದ್ದರು. ಬರೋಡಾದಲ್ಲಿದ್ದಾಗ ದ್ವಾರಕೆಯ ಉತ್ಖನನದಲ್ಲಿ ಶ್ರೀಯುತ ರಾವ್ ಅವರ ಜೊತೆಗೂಡಿ ಇವರು ಕೆಲಸ ಮಾಡಿದ್ದರು.

ಆನಂದ ಶಾಸ್ತ್ರಿಗಳಿಗೆ `ಸಂಗೀತ, ನಾಟಕ ಹಾಗೂ ಸಾಹಿತ್ಯದಲ್ಲೂ ಅಪಾರ ಆಸಕ್ತಿಯಿತ್ತು. ಅಸೋಸಿಯೇಶನ್ನಿನ ಕಲಾವಿಭಾಗದ ಸಕ್ರಿಯ ಸದಸ್ಯೆಯರಾದ ಉಷಾಶ್ರೀಕಾಂತ್ ಹಾಗೂ ಲಲಿತಾ ಬಾಲು ಇವರ ತಂಗಿಯರು.

'ನೇಸರು' ಅಗಲಿದ ಶ್ರೀಯುತರಿಗೆ ಆದರ ಪೂರ್ವಕ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

ನಿಲುವಿನಲ್ಲಿ ಬದಲಾಗಲಿಲ್ಲ. ಕೊಳಕಿನಿಂದ, ಧೂಳಿನಿಂದ ತುಂಬಿ ಆಯಾಸತಪ್ತ ಆ ಸ್ತ್ರೀ ಜನ ವೈಶಾಲಿ ನಗರದಲ್ಲಿ ಬುದ್ಧ ನಿವಾಸದ ಬಳಿ ಅಲೆಯುತ್ತಿದ್ದಾಗ ಬುದ್ಧನ ಪ್ರಿಯ ಶಿಷ್ಯ ಹಾಗೂ ಅವನ ದಾಯಾದಿ (ತಮ್ಮ)ಭಿಕ್ಷು ಆನಂದ ಅವರನ್ನು ನೋಡಿ ಕನಿಕರ ತುಂಬಿ ವಿಚಾರಿಸಿದಾಗ ವಿಷಯ ತಿಳಿದು ಬಂತು. ಭಗವಾನ್‌ಬುದ್ಧನ ಈ ನಿರ್ಧಾರದಿಂದ ಕದಲಿಸಲು ಅವನನ್ನು ಚೆನ್ನಾಗಿ ಅರಿತ ಆನಂದನು ಮಾಡಿದ ಪ್ರಯತ್ನವೇ ಬೇರೆ ರೀತಿಯದು ! ಬುದ್ಧನ ಬಳಿಗೆ ಸಾಗಿ "ಭಂತೇ ! ಪೂಜ್ಯಮಾತೆಗೌತಮೀ ಶಾಕ್ಯಕುಲ ಸ್ತ್ರೀಯರೊಡನೆ ಬಳಲಿ ಬೇಸತ್ತು ದಿನಗಳಿಂದ ಹೊರಗೆ ನಿಮ್ಮ ಅನುಮತಿಗಾಗಿ ಕಾದಿದ್ದಾಳೆ. ಅದಕ್ಕೆ ನಿಮ್ಮ ಉತ್ತರವೇನು? "ಇಲ್ಲ ಆನಂದ, ಸ್ತ್ರೀಯರು ನನ್ನ ಸಂಘದೊಳಗೆ ಬರುವುದು ಬೇಡ. ಖಂಡಿತಾ ಕೂಡದು" "ಅಂದರೆ ಭಂತೇ !ನಿಮ್ಮ ಧರ್ಮವನ್ನು ಪುರುಷರಂತೆ ಸ್ತ್ರೀ ಕಟ್ಟುನಿಟ್ಟಾಗಿ ಪಾಲಿಸಿದರೂ ಸ್ತ್ರೀ ಅನರ್ಹಳು, ಅವಳು ಅಶಕ್ತಳು?" "ಇಲ್ಲ ಆನಂದ, ಹಾಗೇನಿಲ್ಲ. ಅವಳೂ ಶಕ್ತಳು" "ಹಾಗಾದರೆ ನಿಮ್ಮ ಧರ್ಮವು ಕೇವಲ ಪುರುಷರಿಗೆ ಮೀಸಲಾಗಿದ್ದ ನಿಮ್ಮ ತಾಯಿ ಯಶೋದೆಯು ಮಡಿದಾಗ ಎಳೆಮಗುವಾಗಿದ್ದ ನಿಮ್ಮನ್ನು ತನ್ನ ಎದೆಹಾಲುಣಿಸಿ ಬೆಳೆಸಿ ಒಂದು ವ್ಯಕ್ತಿಯನ್ನಾಗಿ ಮಾಡಿ ಈ ಧರ್ಮ ಸಂಸ್ಥಾಪನೆಗೆ ಬೇಕಾದ ಶಕ್ತಿಯನ್ನು ನಿಮಗೆ ತಂದುಕೊಟ್ಟ ಆ ಮಹಾಗೋತಮೀ ತಾಯಿಗೆ ಮಾತ್ರ ನಿಮ್ಮ ಧರ್ಮ ದೂರ. ಅವಳೇ ಅದರಿಂದ ವಂಚಿತಳಾಗಿದ್ದಾಳೆ !ಅಲ್ಲವೆ?" "ಇಲ್ಲ, ಇಲ್ಲ, ಆನಂದ!ಹಾಗೇನಿಲ್ಲ! ಮನೆಯಿಂದ ಹೊರಬಿದ್ದು ಕಾಡುಮೇಡು ಅಲೆಯುತ್ತಾ ಬಂಧುಬಳಗಗಳಿಂದ ದೂರವಾಗಿ ಅನಾಗರಿಕ ಮತ್ತು ಶುಷ್ಕ ವಾತಾವರಣದಲ್ಲಿ ಅಲೆಯುವುದು ಸ್ವಭಾತಃ ಅಬಲೆಯಾದ ಸ್ತ್ರೀಗೆ ಬಹಳ ಕಠಿಣ ವ್ರತ. ಅವಳು ಅದನ್ನು ಅರ್ಥಪೂರ್ಣವಾಗಿ ನಡೆಸಲಾರಳು. ಎಂದು ನನ್ನ ಎಣಿಸಿಕೆ. ಕೆಲವು ಕಠಿಣ ವ್ರತಗಳನ್ನು ಸರಿಯಾಗಿ ಪಾಲಿಸುವುದಾದರೆ ಅವಳೂ ಬೌದ್ಧ ಸಾಧ್ವಿಯಾಗಬಲ್ಲಳು. ಎಂಟು ತೀವ್ರ ಕಟ್ಟಳೆಗಳನ್ನು ನಡೆಸುವುದಾದರೆ ಸರಿ" ಎಂದು ಒಪ್ಪಿದನು.

ಭಿಕ್ಷುಣಿಯರ (8) ಗುರುಧರ್ಮಗಳು ಈ ರೀತಿ ಇದ್ದವು. ಆಗಿನ ಕಟ್ಟಲೆಗಳ ಪ್ರಕಾರ ಭಿಕ್ಷುಣಿ ವೃದ್ಧಳಾಗಿ ಇದ್ದರೂ ಸಹ ಭಿಕ್ಷು ಎಳೆಯವನಾದರೂ ಅವತ್ತೇ ದೀಕ್ಷೆ ವಹಿಸಿದ್ದರೂ ಅವನಿಗೆ ನಮಸ್ಕಾರ ಮಾಡಬೇಕಾಗಿತ್ತು.

ಭಿಕ್ಷುವಿಲ್ಲದ ಆರಾಮದಲ್ಲಿ ಭಿಕ್ಷುಣಿ ವಾಸಮಾಡುವಂತಿರಲಿಲ್ಲ. ಮಹಾಗೌತಮಿಯು ಇದನ್ನು ವಿರೋಧಿಸಿದ್ದರೂ ಪರಿಹಾರವಿಲ್ಲದೆ ಸುಮ್ಮನಿರಬೇಕಾಯಿತು. ಎರಡು ಪಕ್ಷಗಳಿಗೆ ಒಂದು ಬಾರಿ ಆಗುತ್ತಿದ್ದ ಉಪೋಸಥ ಕಾರ್ಯಕ್ರಮಕ್ಕೆ ಉಪದೇಶಕ್ಕಾಗಿ ಭಿಕ್ಷುವನ್ನೇ ಬೇಡಬೇಕಾಗಿತ್ತು. ಭಿಕ್ಷು ಭಿಕ್ಷುಣಿಗಳು ಸೇರಿದ `ಪವರನ' ಕಾರ್ಯಕ್ರಮದಲ್ಲಿ ತನ್ನ ತಪ್ಪನ್ನು ಎಲ್ಲರೆದುರಿಗೂ ಬಿಚ್ಚಿ ಹೇಳಬೇಕಾಗಿತ್ತು. ಭಿಕ್ಷುಣಿ ಯಾವ ರೀತಿಯಲ್ಲೂ ಯಾವ ಭಿಕ್ಷುವನ್ನು ನಿಂದಿಸುವುದಾಗಲೀ ಸಾಧ್ಯವಿರಲಿಲ್ಲ. ಭಿಕ್ಷು ಸಂಘ. ತಪ್ಪು ಮಾಡಿದ ಭಿಕ್ಷುಣಿಯನ್ನು ತೆಗೆದು ಹಾಕಬಹುದಾಗಿತ್ತು. ಆದರೆ ಭಿಕ್ಷುಣಿಸಂಘ, ಭಿಕ್ಷುವಿಗೆ ಏನೂ ಮಾಡಲಾಗುತ್ತಿರಲಿಲ್ಲ. ಇತ್ಯಾದಿ

ಬುದ್ಧನು ಆನಂದನಿಗೆ ವ್ಯಥೆಯಿಂದ ಹೇಳಿದನಂತೆ. "ಆನಂದ ಸಾವಿರವರ್ಷ ಬದುಕಬೇಕಾದ ನನ್ನ ಈ ಧರ್ಮ 500ವರ್ಷಗಳಲ್ಲೇ ಮುಕ್ತಾಯವಾಗುವುದು. ಗಂಡಸರು ಇಲ್ಲದ ಮನೆಗೆ ಕಳ್ಳರು ಸುಲಭವಾಗಿ ನುಗ್ಗಿ ದರೋಡೆ ಮಾಡುವಂತೆ ಇದರ ಸ್ಥಿತಿಯಾದೀತು" ಇದು ನಿಜವಾಗಿಯೂ ಬುದ್ಧವಾಣಿಯೆ? ಪುರುಷ ಪಕ್ಷಪಾತಿಯೊಬ್ಬರ ವೈಯಕ್ತಿಕ ಅಭಿಪ್ರಾಯವು ಧರ್ಮಗ್ರಂಥದಲ್ಲಿ ನುಸುಳಿ ಬಂದಿದೆಯೋ? ಅಂತೂ ಸ್ತ್ರೀಯರು ಬೌದ್ಧ ಸಾಧ್ವಿಗಳಾದರು. ಈ ಸುಖಾಂತವಾದ ತನ್ನ ಪ್ರಯತ್ನಕ್ಕೆ ಆನಂದ ತಲೆ ಬೆಲೆ ತೆರಬೇಕಾಯಿತು. ಭಗವಾನ್ ಬುದ್ಧನ ಪರಿನಿರ್ವಾಣದ ನಂತರ ನಡೆದ ಪ್ರಥಮ ಸಂಗೀತಿ (ಮಹಾಸಭೆ)ಯಲ್ಲಿ ಅವನನ್ನು ಹೀನಮಾನವಾಗಿ ಅಂದರು. ಅವನಿಂದ ಸಂಘ, ಧರ್ಮ ಹಾಳಾಯಿತೆಂದರು. ಬುದ್ಧನ ಹೆಸರು ಕೆಡಿಸಿದನೆಂದರು. ಬುದ್ಧಪ್ರಿಯನಾಗಿದ್ದ ಅವನು ಬುದ್ಧನನ್ನು ತನ್ನ ವೈಯಕ್ತಿಕ ಅಭಿಪ್ರಾಯಕ್ಕೆ ಭಾವುಕತೆಗೆ ತನ್ನ ಸ್ವಂತ ಪ್ರತಿಷ್ಠೆಗೆ ಉಪಯೋಗಿಸಿಕೊಂಡನೆಂದೂ ಹೀಯಾಳಿಸಿದರು. `ಅರ್ಹನ್' ಸ್ಥಿತಿಯನ್ನು ಮುಟ್ಟಿಲ್ಲವೆಂಬ ಕೊಂಕು ತೆಗೆದು ಅವನನ್ನು ಸಭೆಯಿಂದ ಹೊರಗೆ ಹಾಕಿದರು. ಸಭಿಕರಿಗೆ ನೀರು ಸರಬರಾಜು ಮಾಡುವ ಕೆಲಸಕ್ಕೆ ಹಾಕಿದರು. ಆದರೆ ಅವರು ಅವನನ್ನು ಶಾಶ್ವತವಾಗಿ ಹೊರಗೆ ಹಾಕುವಂತೆಯೂ ಇರಲಿಲ್ಲ. ಕಾರಣ ತನ್ನ ಅಗಾಧ ಜ್ಞಾನಭಂಡಾರ ಪ್ರಚಂಡ ಶಕ್ತಿಯಿಂದ ಬುದ್ಧನ ಆತ್ಮೀಯ ಗೆಳೆಯನಂತೆ, ಸೇವಕನಂತೆ ಸದಾಕಾಲ ಅವನೊಡನೆ ಇರುತ್ತಿರುತ್ತಿದ್ದ ಆನಂದ ಬುದ್ಧನ ಪ್ರತಿವಾಣಿಯನ್ನೂ ಚಾಚೂ ತಪ್ಪದೆ ಸಂಗ್ರಹಿಸಿದ್ದ. ಧರ್ಮ ಸಂಕಟಗಳಲ್ಲಿ ಬುದ್ಧನ ಪರಿಹಾರಗಳೇನು ಎಂದು ಅವನು ಅರಿತಿದ್ದ. ಇವತ್ತು ನಾವು ಬುದ್ಧನ ನಿಜವಾಣಿಯನ್ನು ಅವನು ಹೇಳಿದಂತೆಯೇ ಅರಿಯಲು ಕಾರಣ ಆನಂದ. ಜಾನ್‌ಸನ್‌ಗೆ ಒಬ್ಬ ಬಾಸ್‌ವೆಲ್ ಇದ್ದಂತೆ ಭವಿಷ್ಯಕ್ಕಾಗಿ ಭಗವಾನ್ ಬುದ್ಧನ ಸಂದೇಶಗಳನ್ನು ಸಂಗ್ರಹಿಸುವ ಮತ್ತು ಸ್ಥಿರಪಡಿಸುವ ಇಚ್ಛೆಯಿದ್ದ ಆ ಸಭೆಗೆ ಆನಂದನಂತಹವನು ಅಗತ್ಯವಾಗಿದ್ದು ಅವನಿಲ್ಲದೆ ನಡೆಯುತ್ತಿರಲಿಲ್ಲ.

ಈ ಮಧ್ಯೆ ಆನಂದನು ತನ್ನ ಮನೋಸ್ಥೈರ್ಯದಿಂದ ಅರ್ಹನ್ ಆಗಿ ಸಭೆಗೆ ಪ್ರವೇಶಿಸಿದಾಗ ಸಭೆ ನಿಂತು ಕರತಾಡನ ಮಾಡಿ ಅಭಿನಂದಿಸಿತು. ಸ್ತ್ರೀಯುಸಾಧ್ವಿಗಳಾಗಲು ಶ್ರಮಿಸಿದ ಆನಂದನಿಗೆ ಆ ಸಾಧ್ವೀ ಸಮುದಾಯದಲ್ಲಿ ಅತೀವ ಗೌರವವಿದೆ. ಪೂರ್ವದೇಶಗಳಲ್ಲಿ ಅವನನ್ನು ಬುದ್ಧ (ಶಾಕ್ಯಮುನಿ)ನ ಜೊತೆ ಇಟ್ಟು ಪೂಜಿಸುತ್ತಾರೆ. ಹಿಂದೆ ಜಪಾನಿನಲ್ಲಿ ಬೌದ್ಧ ಧರ್ಮ ಹರಡಲು ಕೊರಿಯಾದ ಸಾಧ್ವಿಗಳೇ ಕಾರಣ. ಅವರು ಪ್ರಥಮತಃ ಜಪಾನಿನ ಸ್ತ್ರೀಯರಲ್ಲಿ ಅಂತಃಪುರದಲ್ಲಿ ಅದನ್ನು ತಂದರು. ಬೌದ್ಧ ಸಾಧ್ವಿಗಳು ಆನಂದನಿಗೆ ಪ್ರಥಮ ಪೂಜೆ ಸಲ್ಲಿಸುತ್ತಾರೆ.

ಬೌದ್ಧಧರ್ಮದ ಅವನತಿಗೆ ಸ್ತ್ರೀಯರು ಕಾರಣರಾಗುತ್ತಾರೆಂಬ ಬುದ್ಧನ ಭೀತಿ ಬುಡವಿಲ್ಲದ್ದು ! 500ವರ್ಷಗಳಲ್ಲಿ ನಿರ್ನಾಮವಾಗಬೇಕಾಗಿದ್ದ ಆ ಧರ್ಮ ಅದೇ ಐದುನೂರು ವರ್ಷಗಳಲ್ಲಿ (ಸುಮಾರು ಕ್ರಿ.ಪೂ. ಒಂದನೇ ಶತಮಾನ) ಭಾರತದ ಹೊರಗೆ ಹೋಗಿ ಉತ್ತರದಲ್ಲಿ ಜಯಭೇರಿ ಹೊಡೆಯುತ್ತಿತ್ತು. ಅಫಘಾನಿಸ್ತಾನ, ಮುಖಾಂತರ ಹಿಮಾಲಯದ ಉತ್ತರಕ್ಕೆಲ್ಲಾ ಹರಡಿ ಚೀನಾದೇಶದ ಬಾಗಿಲನ್ನೂ ತಲುಪಿತ್ತು. ದಕ್ಷಿಣದಲ್ಲಿ ಶ್ರೀಲಂಕಾವನ್ನು ಮುಟ್ಟಿ ಅಲ್ಲಿಂದ ಸಮುದ್ರಯಾನದ ಮುಖಾಂತರ ಪೂರ್ವ ದೇಶಗಳಿಗೆ ಹೋಗುವ ಸನ್ನಾಹದಲ್ಲಿತ್ತು. ಇದನ್ನು ಬುದ್ಧನ ಬಾಯಿಯಲ್ಲಿ ಹೇಳಿಸಿದ ಸೂತ್ರಕಾರರ ಅಂತರ್ ಭೀತಿ ಅದು ಅಷ್ಟೆ !

ಇದರಿಂದ ಆದದ್ದೇನು?



## ಹೊಸ ವರ್ಷಕ್ಕೆ ಸ್ವಾಗತ

— ಹೆಚ್. ವಿ. ಜನಾರ್ಧನ

ಅಂದು 1997 ಕೊನೆಯದಿನ ಸಂಭ್ರಮ ಸಡಗರದೊಂದಿಗೆ 1998ರ ಹೊಸ ವರ್ಷವನ್ನು ಸ್ವಾಗತಿಸಲು ಅಸೋಸಿಯೇಶನ್‌ನಲ್ಲಿ ಸದಸ್ಯರೆಲ್ಲರೂ ಸೇರಿದ್ದರು. ಅನುಭವವಿಲ್ಲದ ನಾನು ಹಿರಿಯರ ಮಾರ್ಗದರ್ಶನ ಮತ್ತು ನನ್ನ ಸ್ನೇಹಿತರ ಸಹಕಾರದೊಂದಿಗೆ ನಿರೂಪಣೆಯ ಹೊಣೆ ಹೊತ್ತು ಕಾರ್ಯಕ್ರಮವನ್ನು ಚೊಕ್ಕಟ್ಟಾಗಿ ನಡೆಸಿದೆವು.

ಮೊದಲಿಗೆ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮದ ಪ್ರಾರಂಭ. ಕಾರ್ಯಕ್ರಮದ



ಪ್ರಾರಂಭಕ್ಕೆ ಕಿರಿಯರೊಂದಿಗೆ ಹಿರಿಯರು ಅವರ ನೆಚ್ಚಿನ ಹಾಡುಗಳನ್ನು ಹಾಡಿದರು. ನಂತರದ ಕಾರ್ಯಕ್ರಮ ಮ್ಯೂಜಿಕಲ್ ಹೌಸಿ, ಇದರಲ್ಲಿ ಸ್ವಲ್ಪ ಅಡಚಣೆಯಾಗಲೂ ಲಲಿತಾಬಾಲುರವರ ಅಡಚಣೆಯಾದರೂ ಲಲಿತ ಬಾಲುರವರ ಸಹಾಯದಿಂದ ಸುಗಮವಾಗಿ ನಡೆಯಿತು. ಇದರಲ್ಲಿ ಮೂರು ಬಹುಮಾನಗಳಿದ್ದವು. ನಂತರ ನಮ್ಮ ಡಾಕ್ಟರ್‌ರ ಕೊಡುಗೆಯಿಂದ ಕಳೆದ ವರ್ಷದಂತೆ ಈ ವರ್ಷವೂ ರ್‍ಯಾಫಲ್ಸ್ ಇತ್ತು. ಪುಟಾಣಿಗಳು ಅದೃಷ್ಟವಂತರ ಚೀಟಿಗಳನ್ನು ತೆಗೆಯುವಾಗ ಎಲ್ಲರ ಮನಸ್ಸಿನಲ್ಲೂ ಕುತೂಹಲದೊಂದಿಗೆ ಆ ಚೀಟಿ ತಮ್ಮದಾಗಿರಲೆಂದು ಅನ್ನಿಸಿದ್ದಿರಬಹುದು. ಸುಮಾರು ಬಹುಮಾನಗಳಿದ್ದುದರಿಂದ ತುಂಬಾ ಜನರಿಗೆ ಬಹುಮಾನಗಳು. ನಂತರ ಊಟದ ವ್ಯವಸ್ಥೆ ಇತ್ತು. ರಾಜಣ್ಣನ ಕೈ ಅಡಿಗೆಯ ರುಚಿ ಸವಿದವರಿಗೆ

(ಪುಟ 16ಕ್ಕೆ)

## ದ್ರೌಪದೀ ಸಮೀಕ್ಷೆ — ಪುಸ್ತಕ ವಿಮರ್ಶೆ

● ಗಿರಿಜಾ ಶಾಸ್ತ್ರಿ

'ನೇಸರು' ಪತ್ರಿಕೆಯವರು ಡಾ. ಮಣಿಮಾಲಿನಿಯವರ ಕೃತಿಯಾದ 'ದ್ರೌಪದೀ ಸಮೀಕ್ಷೆ'ಯ ಬಗೆಗೆ ಬರೆಯಬೇಕೆಂದು ಕೇಳಿದಾಗ ಸಂತೋಷದ ಜೊತೆಗೇ, ದ್ರೌಪದಿ ಪಾತ್ರದ ಬಗೆಗೆ ಎಲ್ಲ ರೀತಿಯ ವಿಶ್ಲೇಷಣಾ ಸಾಧ್ಯತೆಗಳನ್ನು, ಲೇಖಕಿಯೇ ಕೊಟ್ಟು ಬಿಟ್ಟಿರುವಾಗ ಬರೆಯುವುದು ಏನನ್ನು? ಎನ್ನುವ ತಾಕಲಾಟದೊಂದಿಗೇ ಪುಸ್ತಕವನ್ನು ಓದಿ ನನಗೆ ಕಂಡ ಮುಖ್ಯವಾದ ಅಂಶಗಳನ್ನು ಇಲ್ಲಿ ಗುರುತಿಸಿದ್ದೇನೆ. ಲೇಖಕಿಯ ಮಹತ್ತರವಾದ ಈ ಪ್ರಯತ್ನಕ್ಕೆ ಅವರನ್ನು ನಾನು ಮೊದಲು ಅಭಿನಂದಿಸುತ್ತೇನೆ.

'ದ್ರೌಪದೀ ಸಮೀಕ್ಷೆ' ಅದರ ಹೆಸರೇ ಸೂಚಿಸುವಂತೆ ಮಹಾಭಾರತದ ಅತ್ಯಂತ ಕ್ರಿಯಾಶೀಲ ಪಾತ್ರವೊಂದರ ಸಂಶೋಧನಾತ್ಮಕ ವಿಶ್ಲೇಷಣೆಯಿದೆ. ಈ ಮಹಾಪ್ರಬಂಧ ಎರಡು ರೀತಿಯ ಚೌಕಟ್ಟಿನಲ್ಲಿ ಬಂಧಿತವಾಗಿದೆ. ಅದು, ಒಂದು ತೌಲನಿಕ ಅಧ್ಯಯನದ ನೆಲೆಯಾದರೆ, ಇನ್ನೊಂದು ಸ್ತ್ರೀವಾದದ ನೆಲೆ. ಸಾಮಾಜಿಕ ಸಂರಚನೆ, ಕೌಟುಂಬಿಕ ನೆಲೆ ಹಾಗೂ ರಾಜಕೀಯ ಪರಿಕಲ್ಪನೆಗಳು ಇಂದಿಗಿಂತ ಬೇರೆಯದೇ ಆದ ಸಂದರ್ಭದಲ್ಲಿ, ಸಾವಿರಾರು ವರುಷಗಳ ಹಿಂದಿನ ಕನಸುಗಳು ಚಿತ್ರಿಸಿದ ದ್ರೌಪದಿಯಂಥ, ಪುರಾತನವಾದ ಒಂದು ರಾಷ್ಟ್ರೀಯ ಪಾತ್ರಕ್ಕೆ, ಇಂದಿನ ಸೃಜನ ಶೀಲ ಮನಸ್ಸು ಯಾವ ರೀತಿ ಪ್ರತಿಕ್ರಿಯಿಸಿದೆ ಎಂಬುದನ್ನು ಆ ಅಧ್ಯಯನ ತಿಳಿಸುತ್ತದೆ. ಇಂದಿನ ವರ್ತಮಾನವನ್ನು ತಮ್ಮ ಗತಕಾಲದ ಇತಿಹಾಸದೊಂದಿಗೆ ಲೇಖಕರು/ ಲೇಖಕಿಯರು ಹೇಗೆ ಗುರುತಿಸಿಕೊಂಡಿದ್ದಾರೆ? ಹೀಗೆ ಗುರುತಿಸಿಕೊಳ್ಳುವಲ್ಲಿ ಅವರನ್ನು ನಿಯಂತ್ರಿಸಿದ ಸಂವೇದನೆಗಳು ಯಾವುವು? ಅದರಿಂದ ಮೂಲ ಪಾತ್ರ ಸಂವಿಧಾನಕ್ಕೆ ಎಷ್ಟರ ಮಟ್ಟಿಗೆ ನ್ಯಾಯ ಲಭಿಸಿದೆ? ಮುಂತಾದವು ಈ ಅಧ್ಯಯನದ ಮುಖ್ಯ ಚರ್ಚೆಯಾಗಿದೆ. ಇದಕ್ಕೆ ಇವರು ಆರಿಸಿಕೊಂಡಿರುವ ಮೂರು ಆಧುನಿಕ ಕಾದಂಬರಿಗಳಾದ, ಭೈರಪ್ಪನವರ 'ಪರ್ವ', ಪ್ರತಿಭಾ ರೇ ಯವರ ಒರಿಯಾ ಕಾದಂಬರಿ 'ಯಾಜ್ಞಸೇನಿ' ಹಾಗೂ ಶಿವಾಜಿ ಸಾವಂತರ ಮರಾಠಿ ಕಾದಂಬರಿ ಮೃತ್ಯುಂಜಯ ಇವುಗಳು `ಮಹಾಭಾರತದ ವಸ್ತುವನ್ನೇ ತಮ್ಮ ಕಥಾ ವಸ್ತುವಾಗುಳ್ಳ ಕೃತಿಗಳು. ದ್ರೌಪದೀ ಪಾತ್ರವನ್ನು ಕೇಂದ್ರವಾಗಿಟ್ಟುಕೊಂಡ ಈ ಮೂರು ಕೃತಿಗಳು. ವ್ಯಾಸಭಾರತದ ಕನ್ನಡ ಅನುವಾದದ ದೊಡ್ಡ ಕ್ಯಾನವಾಸಿಗೆ ಲಗತ್ತಿಸಿಕೊಂಡಿವೆ. ಈ ನೆಲೆಯಲ್ಲಿ ಉಪಯೋಗಿಸಲ್ಪಟ್ಟಿರುವ ಹೇರಳವಾದ ಇಂಗ್ಲೀಷ್ ಅಕ್ಷರಗಳು ಮತ್ತು ಅವತರಣಿಕೆಗಳು ಲೇಖಕಿಯ ಗಾಢವಾದ ಓದಿನ ಹಿನ್ನೆಲೆಯನ್ನು ಅಲ್ಲದೆ, ಅವರ ಅಚ್ಚುಕಟ್ಟಾದ ಪ್ರಾಮಾಣಿಕವಾದ ಸಂಶೋಧನಾ ವಿಧಾನವನ್ನು ಪರಿಚಯಿಸುತ್ತದೆ.

ಸ್ತ್ರೀವಾದ, ಒಂದು ಆಲೋಚನಾ ಕ್ರಮವಾಗಿ ಬದುಕಿನ ವಾಸ್ತವತೆಯನ್ನು ಪುನರ್ ವ್ಯವಸ್ಥೆಗೊಳಿಸುವ ಇತ್ಯಾತ್ಮಕ ಪೂರ್ಣ ದೃಷ್ಟಿ ಕೋನವಾಗಿ ಇನ್ನೂ ಸ್ಪಷ್ಟಗೊಳ್ಳಬೇಕಾಗಿರುವ ಇಂದಿನ ಕನ್ನಡದ ಸಂದರ್ಭದಲ್ಲಿ ಮಣಿಮಾಲಿನಿಯವರ ಈ ಪ್ರಯತ್ನ ಹೊಸ ಒಳನೋಟಗಳನ್ನು ಬೀರುತ್ತದೆ. ಯಾಕೆಂದರೆ ಸ್ತ್ರೀವಾದದ ಸಾಹಿತ್ಯಕ ಚಳವಳಿಯಲ್ಲಿ ಎಲ್ಲ ರೀತಿಯ ಸೃಜನ ಶೀಲ ಕೃತಿಗಳ (ಪುರಾತನ) ಮರು ಅಧ್ಯಯನ (Reverse Reading) ಎನ್ನುವುದು ಒಂದು ಮುಖ್ಯವಾದ Manifeto ಆಗಿದೆ. ಇಂತಹ ಕೃತಿಯೊಂದರ (ಪಾತ್ರವೊಂದರ) ಪುನರ್ ಮೌಲೀಕರಣವು, ಸಾಹಿತ್ಯದಲ್ಲಿ ಹೆಣ್ಣಿನ ಅಪಮೌಲೀಕರಣವನ್ನೂ, ಅಪ್ರಾತಿನಿಧ್ಯವನ್ನು, ಸಾಹಿತ್ಯಕ ದುರಪಯೋಗವನ್ನೂ ಬಯಲಿಗೆಳೆಯುವುದರತ್ತ ಗಮನ ಹರಿಸುತ್ತದೆ. ಮಹಾಭಾರತದ ಕೇಂದ್ರ ಪಾತ್ರವಾದ, ವ್ಯವಸ್ಥೆಯ ಆಧಾರಗಳನ್ನು ಪ್ರಶ್ನಿಸುವ ದ್ರೌಪದಿಯಂತಹ ಪಾತ್ರವನ್ನು ಪುನರ್ ಮೌಲೀಕರಣಕ್ಕೆ ಒಳಪಡಿಸಿರುವುದು ಮಹತ್ವದ ಪ್ರಯತ್ನವಾಗಿದೆ. ಲೇಖಕಿ ಅಳವಡಿಸಿಕೊಂಡಿರುವ ತೌಲನಿಕ ಅಧ್ಯಯನದ ವಿಧಾನ ರಾಷ್ಟ್ರೀಯ ನೆಲೆಯಲ್ಲಿ ಇದಕ್ಕೆ ಅಧಿಕೃತತೆಯನ್ನು ದೊರಕಿಸಿಕೊಡುತ್ತದೆ.

ವ್ಯಾಸಭಾರತದ ಪ್ರಾಚೀನ ದ್ರೌಪದಿ ಹಾಗೂ ಈ ಮೂರು ಕಾದಂಬರಿಗಳ ಸಮಕಾಲೀನ ಮನಸ್ಸು ಮರು ಸೃಷ್ಟಿಸಿದ ಆಧುನಿಕ ದ್ರೌಪದಿ ಈ ಎರಡೂ ಕೃತಿಯುದ್ದಕ್ಕೂ ಸಮಾನಾಂತರವಾಗಿ ಹರಿದು ಬರುವ ಪ್ರಧಾನ ಧಾರೆಗಳಾಗಿವೆ. ಇವು ಮೂಲ ಕೃತಿಗಿಂತ ಹೇಗೆ ಭಿನ್ನ? ಇಲ್ಲವೆ ಯಾವ ನೆಲೆಯಲ್ಲಿ ಮೂಲ ಕೃತಿಯಿಂದ ತಿರುವನ್ನು ಪಡೆದುಕೊಂಡಿದೆ ಅಥವಾ ಸಾಮ್ಯವನ್ನು ಉಳಿಸಿಕೊಂಡಿದೆ ಎಂಬುದು ಇಲ್ಲಿನ ಮುಖ್ಯ ಚರ್ಚೆಯಾಗಿದೆ. ಇದನ್ನು ಪ್ರಮುಖವಾಗಿ ದ್ರೌಪದಿಯ ಪಂಚ ಪತ್ನಿತ್ವದ ನೆಲೆ, ಭೀಮ, ಅರ್ಜುನ ಹಾಗೂ ಕೃಷ್ಣರೊಡನೆ ಅವಳ ಸಂಬಂಧದ ನೆಲೆ ಮುಂತಾದವನ್ನು ಹಲವು ಅಧ್ಯಾಯಗಳ ಶೀರ್ಷಿಕೆಯ ಅಡಿಯಲ್ಲಿ ವಿವೇಚಿಸಲಾಗಿದೆ. ದ್ರೌಪದಿಯ ಬಹುಪತಿತ್ವದ ನೆಲೆಗೆ ಮಾನವಸ್ವಭಾವಶಾಸ್ತ್ರದ (An-

thropological) ವೈಜ್ಞಾನಿಕ ಒಳನೋಟ ವಿದ್ದರೆ, ಅವಳು ಬೆಳೆಸಿಕೊಂಡ ಭಾವನಾತ್ಮಕ ಸಂಬಂಧಗಳಿಗೆ ಕಾರಣಗಳನ್ನು ಶೋಧಿಸುವ ಮನೋವೈಜ್ಞಾನಿಕ ನೆಲೆಯಿದೆ.

ಬದಲಾದ ಇಂದಿನ ಸಾಹಿತ್ಯಕ ಸಂದರ್ಭದಲ್ಲಿ ಪೌರಾಣಿಕ ಆಶಯಗಳು ಅರ್ಥ ಪಡೆದು ಕೊಳ್ಳುತ್ತಿರುವುದು ಎರಡು ಪರಿಕಲ್ಪನೆಗಳ ಮೂಲಕ ಅದು `ಪುರಾಣದ ಪುನರ್ ಸೃಷ್ಟಿ' (Re mythification) ಇಲ್ಲವೆ 'ಪುರಾಣ ಭಂಜನೆ' (De mythification), ಹೀಗೆ ಮಾಡುವಾಗ ಮೂಲಕೃತಿಯ ಸಂವಿಧಾನಕ್ಕೆ ಎಷ್ಟರಮಟ್ಟಿಗೆ ಧಕ್ಕೆ ತಗಲುತ್ತದೆ ಇಲ್ಲವೆ ಅದರ ವಿಕಾಸಕ್ಕೆ ಕಾರಣವಾಗುತ್ತದೆ ಎನ್ನುವುದನ್ನು ಯಾವುದೇ ಲೇಖಕ/ಕಿ ಗಮನದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಕೀರಂ ನಾಗರಾಜರಂಥ ಶ್ರೇಷ್ಠ ವಿಮರ್ಶಕರು, ಕೃತಿಯ ಮೂಲ ಆಶಯಕ್ಕೆ ಧಕ್ಕೆ ತಾರದ Re mythificationನಂಥ ತಂತ್ರಗಳಿಗೆ ಹೆಚ್ಚು ಒತ್ತುಕೊಡುತ್ತಾರೆ. ಯಾವುದೇ `Myth'ನ್ನು ಒಡೆದು ಕಟ್ಟುವಾಗ, ಅದರ ವಿಸ್ಮಯದ ಪೊರೆಯನ್ನು ಕಳಚಿಬಿಟ್ಟಾಗ ಅದಕ್ಕಿರುವ ಅನಂತ ಆಯಾಮದ ರೆಕ್ಕೆಗಳನ್ನು ಕತ್ತರಿಸಿ ಹಾಕುವ ಅಪಾಯವಿದೆ. ಈ ದೃಷ್ಟಿಯಿಂದ ಕೂಡ ನಾವು ಸಮಕಾಲೀನ ಲೇಖಕ/ಕಿಯರನ್ನು ಅಭ್ಯಾಸ ಮಾಡಬೇಕಾಗಿದೆ. ಭೈರಪ್ಪನವರ ದ್ರೌಪದಿ ಸಮಕಾಲೀನ ಆಶಯಗಳಿಗೆ ಹೆಚ್ಚು ಹೆಚ್ಚು ಹತ್ತಿರವಾಗಿದ್ದಾಳೆ. ಆದರೆ ಅವರೂ ಕೂಡ ಕೆಲವು ಕಡೆ ಪುರುಷ ದೃಷ್ಟಿಕೋನದಿಂದಲೇ ನೋಡುವುದರಿಂದ ಮುಕ್ತರಾಗಿಲ್ಲ. (ದ್ರೌಪದಿಯನ್ನು ತನ್ನ `ಪದಾರ್ಥ' ಎನ್ನುವ ಕಡೆಯಲೆಲ್ಲಾ) ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ. ಪ್ರತಿಭಾರೇಯರ ದ್ರೌಪದಿ ಮೂಲ ಭಾರತದ ದ್ರೌಪದಿಯ ಪಾತ್ರಕ್ಕೇ ನಿಷ್ಠಳಾಗಿದ್ದಾಳೆ. ಕೆಲವು ಕಡೆಯಂತೂ ಮೂಲದ ಪ್ರೌಢತೆಯನ್ನೂ ಉಳಿಸಿಕೊಂಡಿಲ್ಲ ಮತ್ತು ಶಿವಾಜಿ ಸಾವಂತರ ಮುಖ್ಯ ಆಕರ್ಷಣೆ ಕರ್ಣನಾಗಿರುವುದರಿಂದ ಎಲ್ಲ ಪಾತ್ರಗಳೂ (ದ್ರೌಪದಿಯೂ ಸೇರಿದಂತೆ) ಅವನನ್ನು ಉದಾತ್ತೀಕರಿಸಲು ದುಡಿಯುತ್ತವೆ ಎಂದು ಲೇಖಕಿ ಅಭಿಪ್ರಾಯ ಪಡುತ್ತಾರೆ. ಮರಾಠಿ, ಒರಿಯಾ ಸಾಹಿತ್ಯದ ಪರಿಚಯವಿಲ್ಲದವರು ಲೇಖಕಿಯ ಸಾಲುಗಳ ಮೂಲಕವೇ ತೃಪ್ತಗೊಳ್ಳಬೇಕಾಗಿದೆ. ಆದರೆ ಅವರು ಈ ಎರಡೂ ಕಾದಂಬರಿಗಳಲ್ಲಿನ ದ್ರೌಪದಿ ಪಾತ್ರದ ಬಗೆಗೆ ಹೇಳಿರುವುದು ಬಹಳವೇ ಕಡಿಮೆ. ಶಿವಾಜಿ ಸಾವಂತರಿಗೆ `ದ್ರೌಪದಿ' ಪಾತ್ರದ ವಿಶ್ಲೇಷಣೆ ಪ್ರಮುಖ ಉದ್ದೇಶವಾಗಿರಲಿಲ್ಲ ಎನ್ನುವುದೇ ಕಾರಣವಾಗಿರಬಹುದು. ಏಕೆಂದರೆ ಅನೇಕ ಅಧ್ಯಾಯಗಳಲ್ಲಿ ವ್ಯಾಸಭಾರತದ ಹಾಗೂ ಪರ್ವದ ದ್ರೌಪದಿ ಸಿಂಹಪಾಲನ್ನು ಪಡೆದುಕೊಂಡಿದ್ದರೆ, `ಯಾಜ್ಞಸೇನಿ' `ಮೃತ್ಯುಂಜಯ'ದ ದ್ರೌಪದಿ ಕೇವಲ ನಾಲ್ಕೈದೇ ಪುಟಗಳಲ್ಲಿ ತನ್ನ ವಿಶ್ಲೇಷಣೆಯನ್ನು ಮುಗಿಸಿಕೊಂಡು ಬಿಡುತ್ತಾಳೆ. ಅಲ್ಲದೇ ಅನುವಾದಿತ ಕೃತಿಗಳು ಆಯಾ ಭಾಷೆಯ ಮೂಲ ಜಾಯಮಾನವನ್ನು ಸಾಂಸ್ಕೃತಿಕ ಮಿತಿಗಳನ್ನು ಎಷ್ಟರ ಮಟ್ಟಿಗೆ ಅಧಿಕೃತವಾಗಿ ಪರಿಚಯಿಸುತ್ತದೆ. ಎನ್ನುವುದೂ ಮುಖ್ಯವಾಗುತ್ತದೆ. ಹೀಗಿದ್ದೂ ದ್ರೌಪದಿಯ ಜೀವನದ ಅನೇಕ ರಹಸ್ಯಗಳನ್ನು ವೈಯಕ್ತಿಕ ತೊಡಕು ಸಿಕ್ಕುಗಳನ್ನು ಬಿಡಿಸಿಕೊಳ್ಳುವ ಅವಳ ಆತ್ಮ ವಿಶ್ವಾಸವನ್ನು ಮೂರು ಕೃತಿಗಳು ಹೇಗೆ ಬಿಂಬಿಸುತ್ತವೆ. ಸಾಂಪ್ರದಾಯಿಕವಾದ ವ್ಯಾಸ ಪರಂಪರೆಯ ಸಾಮಾಜಿಕ ಸಂದರ್ಭದಲ್ಲಿ ಕೂಡ ದ್ರೌಪದಿ ಹೇಗೆ ವಿಶಿಷ್ಟ ಮಹಿಳೆಯಾಗಿದ್ದಾಳೆ ಎನ್ನುವುದನ್ನು ಲೇಖಕಿ, ದ್ರೌಪದಿಯ ಜೀವನದ ಪ್ರಮುಖ ಘಟ್ಟಗಳಲ್ಲಿ (ದ್ಯೂತ, ವಸ್ತ್ರಾಪಹರಣ, ಸ್ವಯಂವರ) ಪ್ರಾಮಾಣಿಕವಾಗಿ ವಿಶ್ಲೇಷಿಸಿದ್ದಾರೆ. ಅಲ್ಲದೆ ಈ ಆಧುನಿಕ ಕಾದಂಬರಿಕಾರರು/ಕಾರ್ತಿಯವರು ಎಷ್ಟರಮಟ್ಟಿಗೆ ಅವಳ ಪಾತ್ರದ ಪರಕಾಯ ಪ್ರವೇಶ ಮಾಡುವುದರ ಮೂಲಕ ಅವಳನ್ನು ಮನೋ ವಿಶ್ಲೇಶಣೆಗೆ ಗುರುತುಮಾಡಿದ್ದಾರೆ? ಮತ್ತು ಅವಳ ಸಾಮಾಜಿಕ ಹಾಗೂ ವೈಯಕ್ತಿಕ ಒಳತೋಟಗಳು ಕಥಾ ವಿಶ್ಲೇಷಣೆಗೆ ಹೇಗೆ ಒಳಗಾಗಿವೆ ಎಂಬುದನ್ನು ಸಮರ್ಥವಾಗಿ ಗುರುತಿಸಿದ್ದಾರೆ. ಈ ಕಾದಂಬರಿಗಳಲ್ಲಿನ ದ್ರೌಪದಿ ಪಾತ್ರದ ಸಾಮ್ಯ, ಭಿನ್ನತೆಗಳನ್ನು ಲೇಖಕಿ ವ್ಯಾಸ ಭಾರತದೊಂದಿಗೆ ಅತ್ಯಂತ ಕಾಳಜಿಯಿಂದ ಗುರುತಿಸಿ ಅಷ್ಟೇ ಶ್ರದ್ಧಾ ಪೂರ್ವಕವಾಗಿ ವ್ಯಕ್ತಪಡಿಸಿದ್ದಾರೆ.

ಈ ಕೃತಿಯ ಮಹತ್ವದ ಜೊತೆಗೇ ಕೆಲವು ಗೌಣವೆನಿಸುವ ಕೊರತೆಗಳೂ ಗಮನಸೆಳೆಯುತ್ತವೆ. ಅದನ್ನು ಈ ಕೆಳಕಂಡಂತೆ ಪಟ್ಟಿ ಮಾಡಬಹುದು.

1. ಸ್ತ್ರೀವಾದದ ಬಗೆಗೆ ಸೈದ್ಧಾಂತಿಕ ಒಳನೋಟಗಳು ಇಲ್ಲಿ ಕಾಣುವುದಿಲ್ಲ.
2 ಅತಿಯಾದ ಅವತರಣಿಕೆಗಳಿಂದ ಈ ಕೃತಿ ಭಾರವಾಗಿದೆ. ಕನ್ನಡ ಅನುವಾದವಿಲ್ಲದ ಇಂಗ್ಲೀಷ್ ಅವತರಣಿಕೆಗಳು ಅನೇಕ ಓದುಗರ ಸಂವಹನಕ್ಕೆ ಅಡ್ಡ ಬರುತ್ತದೆ. ಇವುಗಳ ಒತ್ತಡದಲ್ಲಿ ಲೇಖಕಿ ಹೇಳಿರುವ ಮಾತುಗಳು ಬಹಳವೇ ಕಡಿಮೆ. ಅನೇಕ ಕಡೆ ಮುಕ್ಕಾಲು ಪುಟದ ಅವತರಣಿಕೆಗಳಿಗೆ ಕೆಲವೇ ಸಾಲಿನ ಲೇಖಕಿಯ ಇತ್ಯಾತ್ಮಕ ಇಲ್ಲವೇ ನೇತ್ಯಾತ್ಮಕ ಅಭಿಪ್ರಾಯವಿದೆಯೇ ಹೊರತು ಅವುಗಳಿಗೆ ಕಾರಣಗಳು ದೊರಕುವುದಿಲ್ಲ.
3. ಬಹುಪತಿತ್ವದ ಬಗ್ಗೆ ವಿವರವಾದ ಉಲ್ಲೇಖಗಳನ್ನು ಕೊಡುವ ಲೇಖಕಿ (ಪುಟ 43-44), ಹಿಮಾಲಯದ ಗಢ್ವಾಲ ಪ್ರಾಂತ್ಯದಲ್ಲಿ ಭೈರಪ್ಪನವರು ಕಂಡ ಬಹುಪತಿತ್ವ ಸಂಪ್ರದಾಯವನ್ನು ಮಹಾಭಾರತಕ್ಕೆ ಜೋಡಿಸುವುದು `ವಿಲೋಮ ಕ್ರಮ' (ಪುಟ 91) ಎಂದು ವಾದಿಸುವುದು ಸೋಜಿಗವೆನಿಸುತ್ತೆ.
4. ಕುಂತಿ ದ್ರೌಪದಿಯನ್ನು ಪಂಚ ಪತಿತ್ವಕ್ಕೆ ಒತ್ತಾಯಿಸುವುದು ಕೇವಲ ರಾಜಕೀಯ (ದ) ವಿಶ್ವಾಸ ದೂರಾಲೋಚನೆಯಲ್ಲದೆ, ಅವಳಿಗೆ ದೊರಕದೇ ಹೋದ `ಪುರುಷ ಸಾಹಚರ್ಯ'ದ ಕೊರತೆಯೂ ಇದ್ದಿರಬಹುದು.
5. ಇತಿಹಾಸದ ಯಾವುದೋ ಬಿಂದುವಿನಲ್ಲಿ ಸ್ತ್ರೀಯು ತನ್ನ ಅಸ್ತಿತ್ವವನ್ನು ಕಳೆದುಕೊಂಡು ಬಿಟ್ಟಳು. " (ಪು30) ಎನ್ನುವ ಲೇಖಕಿಯ ಅನಿರ್ದಿಷ್ಟ ಅಭಿಪ್ರಾಯಕ್ಕೆ, ಉತ್ತರ ಋಗ್ವೇದ ಕಾಲದ ತನ್ನ ಉಚ್ಚ್ರಾಯ ಸ್ಥಿತಿಯಿಂದ ಹಿಡಿದು ಪುರಾಣ ಕಾಲಕ್ಕೆ ಬರುವಾಗ ಮತ್ತು ಅನಂತರ ಕಾಲ ಕ್ರಮೇಣ ಹೇಗೆ ಸ್ತ್ರೀ ತನ್ನ ಅಸ್ತಿತ್ವವನ್ನು ಕಳೆದುಕೊಂಡಳು ಎನ್ನುವುದು A.S. Altekar ಅವರ `Woman in Indian Civilization' ಪುಸ್ತಕದಲ್ಲಿ ವಿವರವಾಗಿ ದೊರಕುತ್ತದೆ.
6. `ಐವರ ಮೇಲೆಯೂ ಒಂದೊಂದು ಬಾರಿ ಕಾಮ ಬಾಣದಂತಿದ್ದ... ಕಟಾಕ್ಷ ವೀಕ್ಷಣೆಯನ್ನು ಬೀರಿ ಅವರೈವರ ಸೌಂದರ್ಯದ ಸೊಬಗನ್ನೂ ಮನಸ್ಸಿನಲ್ಲಿಯೇ ಅನುಭವಿಸುತ್ತಾ ಕುಳಿತಳು" ಎನ್ನುವ ವ್ಯಾಸಭಾರತದ ಮಾತುಗಳನ್ನು ಒಪ್ಪುತ್ತ, ಲೇಖಕಿ ದ್ರೌಪದಿ ಪಾಂಡವರ ಆಕರ್ಷಣೆಯ ಮೂಲಭೂತ ಸ್ವರೂಪ ದೈಹಿಕ ಸೆಳೆತವೇ ಆಗಿತ್ತು ಎಂದು ಅಭಿಪ್ರಾಯ ಪಡುತ್ತಾರೆ ಒಮ್ಮೆಲೆ ಐವರ ಮೇಲೆಯೂ ಕಾಮ ಕಟಾಕ್ಷ ಬೀರುವುದು ಅಸಹಜತೆಯನ್ನು ತೋರಿಸುತ್ತದಲ್ಲವೆ?

ಇಂತಹ ಹಲ ಕೆಲವು ಕೊರತೆಗಳು ಈ ಮಹಾಪ್ರಬಂಧದ ಕೊಡುಗೆಯ ಮುಂದೆ ಗೌಣವೆನಿಸುತ್ತವೆ. ಸಮಕಾಲೀನ ಲೇಖಕ/ಕಿಯರು ಪುರಾಣಗಳನ್ನು ಪುನರ್ ಸೃಷ್ಟಿಸುವಾಗ ಎದುರಿಸುವ ಸೃಜನ ಶೀಲ ಸಮಸ್ಯೆಗಳನ್ನು ಸ್ತ್ರೀವಾದಿ ನೆಲೆಯ ಮೂಲಕ ಮೊದಲು ಬಾರಿಗೆ ಅಧ್ಯಯನಕ್ಕೆ ಒಳಪಡಿಸಿ ಮುಂದಿನ ಅಧ್ಯಯನಗಳಿಗೆ ಲೇಖಕಿ ಮಾದರಿಯನ್ನು ಹಾಕಿಕೊಟ್ಟಿದ್ದಾರೆ. ಮುಂಬಯಿಯ ವಿ.ವಿ.ಯ ಕನ್ನಡ ವಿಭಾಗವು ಈ ಬಗೆಯ ಕೃತಿಗಳನ್ನು ಪ್ರಕಟಿಸುವುದರ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಸ್ವೋಪಜ್ಞ ಕಾಣಿಕೆಯನ್ನು ಸಲ್ಲಿಸುತ್ತಿರುವುದು ಅದರ ಅಲ್ಪಾವಧಿಯಲ್ಲಿಯೇ ಗಮನಾರ್ಹ ಸಾಧನೆಯಾಗಿದೆ.

●

# ಕನ್ನಡ ಕಲಾಕೇಂದ್ರದ 39ನೇ ವಾರ್ಷಿಕೋತ್ಸವ

● ರಮಾಕೃಷ್ಣ

ಕನ್ನಡ ಕಲಾ ಕೇಂದ್ರದ 39ನೇ ವಾರ್ಷಿಕೋತ್ಸವದ ಅಂಗವಾಗಿ ತಾ. 4-2-98, 5-2-98 ಹಾಗೂ 6-2-98ರಂದು ಮೂರು ನಾಟಕಗಳ ಪ್ರದರ್ಶನವನ್ನು ಮಾಡಲಾಯ್ತು.

ಮೊಟ್ಟಮೊದಲಿಗೆ ಮೈಸೂರು ಅಸೋಸಿಯೇಶನ್ನಿನವರಿಂದ ಡಾ. ಕೀರ್ತಿನಾಥ' ಕುರ್ತುಕೋಟಿಯವರ `ಆ ಮನಿ' ಎಂಬ ನಾಟಕವನ್ನು ಪ್ರದರ್ಶಿಸಲಾಯ್ತು. ಇದರ ಕತೆ ಹಿಂದೆ ಭವ್ಯೋಪೇತವಾಗಿ ಆ ಮನೆಯಲ್ಲಿ ಬಾಳಿದ ಗೌಡನ ಕುಟುಂಬದ ದುರ್ದಶೆ ಹಾಗೂ `ಇಂದಿನ ಮಕ್ಕಳೇ ನಾಳಿನ ಪ್ರಜೆಗಳು' ಎಂಬ ನಾಣ್ಣುಡಿಯಂತೆ ತಮ್ಮ ಹಿರಿಯರನ್ನು ಅನುಕರಿಸಿ ಮಕ್ಕಳು ಆ ಮನೆಯ ಸಮೀಪ ಆಡಿದ ಆಟವನ್ನು ಕುರಿತದ್ದು. ಒಬ್ಬ ಮುದುಕನೂ, ಮುದುಕಿಯೂ ಪಾಳುಬಿದ್ದ ಕೋಟೆಯಂತಹ ಮನೆಯ ಹೊರ ಆವರಣದಲ್ಲಿ, ನೆರಳಿಗಾಗಿ ಮರದ ಕೆಳಗೆ ಕುಳಿತು ಮಾರಾಟಕ್ಕಾಗಿ ತಮ್ಮ ಸರಕನ್ನಿಟ್ಟುಕೊಂಡು ಶಾಲೆಯ ಮಕ್ಕಳಿಗಾಗಿ ಕಾಯುತ್ತಾ ಕುಳಿತಿರುತ್ತಾರೆ. ಅವರಿಬ್ಬರ ನಡುವಿನ ಸಂಭಾಷಣೆಯಲ್ಲಿ ಆ ಮನೆಯ ದುರ್ದಶೆಯ ಹಿಂದಿನ ಕತೆ ಬಿಚ್ಚಿಕೊಳ್ಳುತ್ತದೆ.

ಹಣ್ಣು ಮಾರುವವಳು "ನಿಂದು ಬರೀ ಸಾವಿನ ಕತೆ" ಎಂದು ಹೇಳುತ್ತಲೇ ಎಲೆ ಅಡಿಕೆ ಮೆಲ್ಲುತ್ತಾ ಕೇಳುತ್ತಾಳೆ. ಈ ಸನ್ನಿವೇಷದಲ್ಲಿ ಇವರಿಬ್ಬರ ಸುದೀರ್ಘವಾದ ಮಾತುಕತೆ ಪ್ರೇಕ್ಷಕರಿಗೆ ಬೇಸರ ತರಿಸುತ್ತದೆ.

ಶಾಲೆ ಬಿಟ್ಟೊಡನೆ ಮಕ್ಕಳ ಆಟ ಪಾಟ, ಜಗಳ, ಮಾತುಗಳಿಂದ ರಂಗಮಂಚ ತುಂಬಿ ಬಿಡುತ್ತದೆ. ಅಂದು ಶನಿವಾರ, ಮಕ್ಕಳಲ್ಲಿ ರಜಾದ ದಿನಕ್ಕೆ ಆಟದ ಏರ್ಪಾಟಾಗುತ್ತದೆ. ಎಲ್ಲಾ ಮಕ್ಕಳಲ್ಲಿ ಮಾತಿನ ಮಲ್ಲಿಯಾದ `ಕಾಶಿ'ಯದ್ದೇ ಮುಂದಾಳುತನ ಇವರಾಡುವ ಆಟ "ಮದುವೆ ಆಟ" ವಧು, ವರರನ್ನು ಗೊತ್ತು ಪಡಿಸಿ ಹೆಣ್ಣು ನೋಡುವುದರಿಂದ ಹಿಡಿದು, ಬೀಗರ ಮಾನ ಸನ್ಮಾನ ಕೊಡುವುದು ಬಿಡುವುದು ಎಲ್ಲವೂ ಪುಟಾಣಿ ಜೋಯಿಸನ ನೇತೃತ್ವದಲ್ಲಿ ಲಗ್ನಪತ್ರಿಕೆ ಬರೆಯುವುದು, ವರದಕ್ಷಿಣೆ ಕೊಡಿಸುವುದು ಅಂತರಪಟ ಹಿಡಿದು 'ಸುಲಗ್ನಾ ಸಾವಧಾನ, ಸುಮುಹೂರ್ತ ಸಾವಧಾನ' ಎಂದು ಮದುವೆ ಸಾಂಗವಾಗಿ ನೆರವೇರುತ್ತದೆ ನಂತರ ಆರತಿ, ಅಕ್ಷತೆ, ಊಟ, ಎಂಜಲಕ್ಕೆಗೆ ವಧು (ಗಂಗೂ) ನೀರು ಹಾಕಲಿ ಎಂದು ವರ (ಕಿಟ್ಟು) ಕೇಳುವುದು ಆವಳು ಆ ಕ್ಷಣಾದಲ್ಲೇ `ನಾನೇನು ನಿನ್ನ ಹೆಂಡ್ತಿ ಅಲ್ಲಾ' ಎಂದು ಮುನಿಸಿಕೊಳ್ಳುವುದು, ಕಿಟ್ಟು ಹೆಂಡತಿಯನ್ನು ಹೊಡೆಯುವವನೆಂದು ಬೆದರಿಸುವುದು, ಅವಳು ಮುನಿಸಿಕೊಂಡು ತೌರಿಗೆ ಹೋದಾಗ ಅಲ್ಲಿ ತಾಯಿ ಮಗಳನ್ನು ತನ್ನಲ್ಲೇ ಉಳಿಸಿಕೊಳ್ಳಲು ಪ್ರಯತ್ನಿಸುವುದು ತಂದೆ ಅದಕ್ಕೆ ಅವಕಾಶ ಕೊಡದೆ ಕಾಶೀ ಬಾಯಿಗೆ ಸೊಸೆಯನ್ನು ಒಪ್ಪಿಸುವುದು, ಅತ್ತೆಯಾದ ಕಾಶೀಬಾಯಿ ನೆರೆಕರೆಯವರೊಂದಿಗೆ `ಸೊಸೆ ಮೋಡಿ ಮಾಡಿ ಮಗನನ್ನು ಬುಟ್ಟಿಯಲ್ಲಿ ಹಾಕಿಕೊಂಡಿದ್ದಾಳೆಂದು ದೂರುತ್ತಾ ಕಣ್ಣೀರು ಹಾಕುವುದು ಈ ಸನ್ನಿವೇಷಗಳನ್ನೆಲ್ಲಾ ಮಕ್ಕಳು ಬಹಳ ಸಹಜವಾಗಿ ಸೀರೆಯುಟ್ಟು ಪಂಚೆ ಸುತ್ತಿ ಓಡಾಡುತ್ತಾ ಮದುವೆ ಮನೆಯ ಸಂಭ್ರಮವನ್ನು ಪ್ರದರ್ಶಿಸಿದರು. ಕಿಟ್ಟು, ಗಂಗೂ ಎಲ್ಲರ ಕೀಟಲೆಯಿಂದ ತಪ್ಪಿಸಿಕೊಳ್ಳಲು ಮುಚ್ಚಿಟ್ಟುಕೊಳ್ಳುವರು. ಸಂಜೆಯಾದಂತೆ ಮಕ್ಕಳಿಗೆ ದೆವ್ವದ ಮನೆಯ ಹೆದರಿಕೆ ಒಂದು ಕಡೆ, ದೊಡ್ಡವರು ಬಯ್ಯುವುದು ಇನ್ನೊಂದುಕಡೆ ಹೀಗಾಗಿ ತಮ್ಮ ಸೀರೆ, ಪಂಚೆಗಳನ್ನು ಬಿಚ್ಚಿ ಕಂಕುಳಿಗಿಟ್ಟು ಕಿಟ್ಟು, ಗಂಗೂನ ಕಾಣದೆ ಗಾಬರಿಯಾಗಿ ಇಬ್ಬರನ್ನೂ ಕೂಗಿ ಕೂಗಿ ಸಾಕಾಗಿ ಮನೆಗೆ ಹೋಗುತ್ತಾರೆ. ಅವರೆಲ್ಲಾ ಹೋದಮೇಲೆ ಕಿಟ್ಟಾ, ಗಂಗೂ ಪೊದೆಯಿಂದ ಹೊರಕ್ಕೆ ಬಂದು ತುಳಸಿ ಕಟ್ಟೆಯ ಬಳಿ ಬೆಳದಿಂಗಳಿನಲ್ಲಿ ಕೂತು ತಮ್ಮ ತಮ್ಮ ಜೀವನದ ಧ್ಯೇಯ ಹೇಳುತ್ತಾರೆ. ಗಂಗೂ ಒಳ್ಳೆ ಗಂಡ ಸಿಕ್ಕಿ ಬಾಳು ಹಸನಾದರೆ ಸರಿ ಇಲ್ಲವಾದರೆ ನಮ್ಮವ್ವ ಬಿದ್ದ ಭಾವಿಗೆ ನಾನೂ ಬೀಳುವೆ, ಎನ್ನುತ್ತಾಳೆ. ಕಿಟ್ಟು ತಾನು ದೊಡ್ಡವನಾಗಿ ಕನಸು ಕಾಣುತ್ತಾನೆ. ಕಿಟ್ಟು ಗಂಗೂಗೆ ರಾಜಕುಮಾರನ ಕಥೆ ಹೇಳುತ್ತಾ ಗಂಗು ಕೇಳುತ್ತಾ ಕೇಳುತ್ತಾ ಒಬ್ಬರೊನ್ನೊಬ್ಬರು ಒರಗಿ ನಿದ್ದೆ ಹೋಗುತ್ತಾರೆ. ಆ ಮನೆಯ ಭಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದ ತಾಯಿ ದೆವ್ವವಾಗಿ ಬಂದು ಅರಿಯದ ಮುಗ್ಧ ಮಕ್ಕಳನ್ನು ಹರಿಸುತ್ತಾಳೆ. ಈ ದೃಶ್ಯದೊಂದಿಗೆ ನಾಟಕ ಕೊನೆಗೊಳ್ಳುತ್ತದೆ. ತಾನೂ ಅರಿಯದ ಮಕ್ಕಳೆಂದು ತಿಳಿದು ತಂದೆ ತಾಯಿ ಬೇಜವಾಬ್ದಾರಿಯಾಗಿ ವರ್ತಿಸಿದರೆ ದೊಡ್ಡವರ ನಡೆನುಡಿಯನ್ನು ಸದಾಕಾಲ ಗಮನಿಸುತ್ತಿರುವ ಮಕ್ಕಳ ಮೇಲೆ ಪರಿಣಾಮ ಖಂಡಿತಾ ತಮ್ಮ ಮಕ್ಕಳಿಗಾಗಿ ಯಾದರೂ ಹಿರಿಯರು ಜವಾಬ್ದಾರಿಯಿಂದ ನಡೆಯಬೇಕು.

11 ಮಕ್ಕಳಲ್ಲಿ ಇಬ್ಬರ ಮನೆ ಮಾತು, ತೆಲುಗು, ತಮಿಳು ಆಗಿದ್ದರೂ ಉತ್ಸಾಹದಿಂದ ನಾಟಕದಲ್ಲಿ ಭಾಗವಹಿಸಿ ಸಮರ್ಥವಾಗಿ ನಡೆಸಿದರು.

ಈ ನಾಟಕವನ್ನು ನಿರ್ದೇಶಿಸಿದ ಡಾ. ಬಿ. ಆರ್. ಮಂಜುನಾಥ್‌ರವರಿಗೂ ಹಾಗೂ ಆ ಮಕ್ಕಳ ತಾಯಂದಿರಿಗೆ ಈ ನಾಟಕದ ಶ್ರೇಯಸ್ಸು ದೊರೆಯುತ್ತದೆ.

ತಾ. 5-2-98ರಂದು ಕರ್ನಾಟಕ ಸಂಘದ ಕಲಾವಿದರಿಂದ `ಹಾಡು ಬಾ ಕೋಗಿಲೆ ನಲಿದಾಡು ಬಾನವಿಲೆ' ಎಂಬ ನೃತ್ಯ ನಾಟಕ' ಪ್ರದರ್ಶಿತವಾಯ್ತು.

ಇದರಲ್ಲಿ ಮಹರ್ಷಿ ವಶಿಷ್ಠರು ಕನ್ಯಾರ್ಥಿಯಾಗಿ ಹುಡುಕಾಟ ಪ್ರಾರಂಭಿಸುತ್ತಾರೆ. ಅವರಿಗೆ ಅವರ ಮನ ಮೆಚ್ಚಿದ ಮನದನ್ನೆ ದೊರೆಯದೇ ಹೋದಾಗ, ಕೊಟ್ಟ ಕೊನೆಗೆ `ಅರುಂಧತಿ'ಯನ್ನು ಕಂಡು ತಮಗೆ ಅನುರೂಪಳೆಂದು ಅವಳನ್ನು ಮಹರ್ಷಿ ವಶಿಷ್ಠರು ವಿವಾಹವಾಗುತ್ತಾರೆ. ಈ ವಿವಾಹವನ್ನು ವಿರೋಧಿಸಿದ ತಪಸ್ವಿಗಳು ಹಾಗೂ ಅವರ ಪತ್ನಿಯರು ಇವರಿಗೆ ಬಹಿಷ್ಕಾರ ಹಾಕುತ್ತಾರೆ. ಅರುಂಧತಿ ತನ್ನ ಪತಿ ವ್ರತಾ ಶಕ್ತಿಯಿಂದ ಪತಿಯ ಆಜ್ಞೆ ಪಡೆದು. ಅಗ್ನಿಯನ್ನು ಬಂಧಿಸಿಡುತ್ತಾಳೆ. ಎಲ್ಲೆಲ್ಲೂ ಹಾಹಾಕಾರ, ಅಂಧಕಾರ ತುಂಬುತ್ತದೆ. ಇದು ಅರುಂಧತಿಯ ಮಹಿಮೆಯಿಂದಾದದೆಂದು ತಿಳಿದ ತಾಪಸಿಗಳೆಲ್ಲಾ ಅರುಂಧತಿಯನ್ನು ಮೊರೆ ಹೋಗುತ್ತಾರೆ. ಅವಳು ತಾಪಸಿಗಳನ್ನು ಕ್ಷಮಿಸಿ ಅಗ್ನಿಯನ್ನು ಬಿಡುಗಡೆ ಮಾಡುತ್ತಾಳೆ. ಇದು ನಾಟಕದ ಕಥೆ, ಇದು ಬಹುಮಾನಿತ ತುಳು ಭಾಷಾಂತರ ಕೃತಿ.

ಇದರಲ್ಲಿ ಗಮನಿಸಬೇಕಾಗಿ ಬಂದ ಅಂಶವೆಂದರೆ

ತಪಸ್ವಿಯಾದ ಮಹರ್ಷಿ ವಶಿಷ್ಠರು ಕನ್ಯಾರ್ಥಿಯಾಗಿ ಹೊರಟಾಗ ಅವರ ಮನೋಭಾವ ಎಂತಹದಿತ್ತು? ಸ್ವಾಮೀ ವಿವೇಕಾನಂದರ ಪ್ರಕಾರ ಋಷಿ ಎಂದರೆ ಮಹಾಪ್ರಮಾಣವಾಗಿರುವವನೂ ಮಂತ್ರ ದ್ರಷ್ಟಾರನೂ, ಆತ್ಮಸಾಕ್ಷಾತ್ಕಾರ ಮಾಡಿಕೊಂಡಿರುವ ವ್ಯಕ್ತಿ. ತನ್ನ ಬಾಳನ್ನು ಲೋಕ ಕಲ್ಯಾಣಾರ್ಥಕ್ಕಾಗಿ ಮುಡಿಪಿಟ್ಟ ವ್ಯಕ್ತಿ. ಅಂದರೆ ನೈತಿಕವಾಗಿ ಅತ್ಯುನ್ನತ ಮಟ್ಟವನ್ನು ತಲಪಿರುವವನು. ಇಂತಹ ಮಹರ್ಷಿ ಕನ್ಯಾರ್ಥಿಯಾಗಿ ಹೊರಟು, ಮೃಗನಯನೆ, ಚಂಚಲನೇತ್ರೆ, ಸಿಂಹ ಕಟಿಯುವಳು. ಹಂಸಗಮನೆಯನ್ನು ಹುಡುಕುತ್ತಾ ಹೊರಟರೆಂದರೆ ಹಾಸ್ಯಾಸ್ಪದವೇ ಸರಿ ! ಸಪ್ತ ಋಷಿಗಳಲ್ಲಿ ಒಬ್ಬರಾದ ವಶಿಷ್ಠರು ವರ್ಣಾಶ್ರಮ ಧರ್ಮವನ್ನು ಮೀರಿ ನಿಂತ ಧೀಶಕ್ತಿ ಉಳ್ಳವರು, ಅವರು ತಮಗೆ ಅನುರೂಪಳಾದ ಸಾಧ್ವಿಯನ್ನೂ, ಸುಶೀಲೆಯನ್ನೂ, ದಯೆ ಕರುಣೆಯ ಆಗರದ ಹೆಣ್ಣನ್ನೂ ಅರಸಿರಬೇಕಲ್ಲವೇ? ವಶಿಷ್ಠರಂತಹವರೇ ಅಲ್ಲವೇ ಸಮಾಜಕ್ಕೆ ಮಾರ್ಗದರ್ಶನ ಮಾಡುವವರು?

ಈ ನಾಟಕದ ನೃತ್ಯ ನಿರ್ದೇಶಕಿಯಾದ ಶ್ರೀಮತಿ ಸಿರಿರಾಮರವರು ಚುರುಕಾದ ನಡೆಯುಳ್ಳ ಸನ್ನಿವೇಶಕ್ಕೆ ಹೊಂದುವಂತೆ ನಾಟ್ಯ ನಿರ್ದೇಶನ ಮಾಡಿದ್ದಾರೆ. ಮೇಳದವರ ಉಡುಗೆ, ತೊಡುಗೆ, ಸೂತ್ರಧಾರ ನಾಟಕದ ಬಗ್ಗೆ ನೀಡುವ ವಿವರಣೆ ಮೇಳದವರ ಹಾವ ಭಾವ ಪಾತ್ರಗಳಿಗೆ ಒಪ್ಪುವಂತಿದ್ದು ನಾಟ್ಯ ನಿರ್ದೇಶನ ಉತ್ತಮವಾಗಿತ್ತು.

ಹಿನ್ನೆಲೆ ಸಂಗೀತ ಕೆಲಕಡೆ ಸಪ್ಪೆಯಾಯ್ತು. ಗಾಯಕರುಗಳು ಇನ್ನೂ ಉತ್ತಮ ಮಟ್ಟದ ಸಂಗೀತವನ್ನು ಕೊಡಬಹುದಿತ್ತು.

ಒಟ್ಟಿನಲ್ಲಿ ಈ ನಾಟಕ ಪ್ರೇಕ್ಷಕವೃಂದಕ್ಕೆ ಮೆಚ್ಚಿಗೆಯಾಯ್ತು. ಶ್ರೀ ಭರತ್ ಕುಮಾರ್ ಪೋಲಿಪುರವರ ನಿರ್ದೇಶನ ಶ್ರೀಮತಿಯರಾದ ಸಿರಿರಾಮ ಮತ್ತು ಸರೋಜ ಶ್ರೀನಾಥರ ಸಂಗೀತ ನೃತ್ಯ ನಿರ್ದೇಶನದಡಿ ಬಂದ ನಾಟಕ ಒಳ್ಳೆಯ ಮನರಂಜನೆಯನ್ನು ನೀಡಿತು.

30ನೆಯ ನಾಟಕ `ಉರುಳು' ಹಿಂದೀನಾಟಕದ ಅನುವಾದ ಇದನ್ನು ಮಂಗಳೂರು ತಂಡದವರು ಪ್ರದರ್ಶಿಸಿದರು. ಇದು ಒಂದು ಗಂಭೀರ ನಾಟಕವಾಗಿದ್ದು, ಕ್ಯಾನ್ಸರ್ ಖಾಯಿಲೆಗೆ ಗುರಿಯಾದ ತಂದೆಯನ್ನು ಟ್ರಕ್ ಚಾಲಕನಾದ ನಂದಿ ತಂದೆಗೆ ಉಪಚಾರ ಮಾಡಿಸಲೂ ಶಕ್ತಿ ಇಲ್ಲದೆ ತಂದೆಯ ಪ್ರತಿನಿತ್ಯದ ಯಾತನಾಮಯ ಜೀವನವನ್ನು ಕಂಡು ಉದ್ವೇಗ, ಪರಿಸ್ಥಿತಿಯ ಒತ್ತಡದಿಂದ ತಂದೆಯ ಕತ್ತು ಹಿಸುಕಿ ಕೊಲ್ಲುತ್ತಾನೆ. ತಂದೆ ಸತ್ತಮೇಲೆ ತಾನೇನು ಮಾಡಿದೆ ಎಂದು ಅರಿವಾದರೂ ಅದು ಕೊಲೆ ಕೊಲೆಯೇ ಅದಕ್ಕೆ ಪ್ರತ್ಯಕ್ಷದರ್ಶಿಯೂ ಇದ್ದು ಇವನಿಗೆ ಜೈಲಾಗುತ್ತದೆ. ಇವನಿಗೆ ವಕೀಲನನ್ನು ಒದಗಿಸುತ್ತ ಜೈಲರ್ ಮೂರೇ ಪಾತ್ರವುಳ್ಳ ಈ ನಾಟಕದಲ್ಲಿ ನ್ಯಾಯಾಲಯದ `ಪೂರ್ವ ಪ್ರಯೋಗ' (Reharsal) ನಡೆಸುತ್ತಾರೆ. ಇವರಿಬ್ಬರೇ ನ್ಯಾಯಾಧೀಶ, ಕಕ್ಷಿ, ಪ್ರತಿಕಕ್ಷಿ, ವಕೀಲರು, ಸಾಕ್ಷಿಗಳೂ ಆಗಿ ಏಕಪಾತ್ರಾಭಿನಯದಂತೆ ಅಭಿನಯಿಸುತ್ತಾರೆ. ನಂದಿಗೆ ತಾನು ತಂದೆಯನ್ನು ಖೂನಿ ಮಾಡಿಲ್ಲ ಅವನು ಇನ್ನು ಕೆಲವೇ ದಿನದಲ್ಲಿ ಸಾಯುವವನೇ ಇದ್ದು, ಅವನ ಯಾತನಾಮಯ ಜೀವನವನ್ನು ಕೊನೆಗಾಣಿಸಿದೆ ಎನ್ನುವ ಭಾವನೆ ಇದ್ದರೂ ಇದನ್ನು ನ್ಯಾಯಾಲಯ ಒಪ್ಪೀತೆ? ತನಗೆ ಬಿಡುಗಡೆ ಸಾಧ್ಯವೇ? ಇದಕ್ಕೆ ಇವನ ವಕೀಲನೂ ಉತ್ತರಿಸಲಾರ. ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ.

ವಕೀಲ ಶಾಂತರಾಮ ಹಾಗೂ ಆರೋಪಿ ನಂದಿ ಪಾತ್ರಧಾರಿಗಳು ನಾನಾ ಪಾತ್ರವನ್ನು ಅಭಿನಯಿಸುತ್ತಾ ಧ್ವನಿಯ ಅನುಕರಣೆ ಹಾವಭಾವ ಇತ್ಯಾದಿಗಳಿಂದ ಪ್ರೌಢ ಅಭಿನಯವನ್ನು ನೀಡಿದರು. ನಾಟಕದಲ್ಲಿ ಇರುವ ಪ್ರಶ್ನೆ ಪ್ರೇಕ್ಷಕರಿಗೂ ಪ್ರಶ್ನೆಯೇ. ನಂದಿ ಬಿಡುಗಡೆಯಾದಾನೆ? ಇದನ್ನು ಮಾನವತೆಯ ಒರೆಗಲ್ಲಿಗೆ ಹಚ್ಚಿನೋಡುವ ಕಾನೂನು ಇದೆಯೆ??? ●

# ಸತ್‌ಸಂಗದ ಕರ್ನಾಟಕ ಪ್ರವಾಸ

● ಜಯಮ್ಮ ಸಿ. ಕೆ. ಎಸ್. ರಾವ್

ನಮ್ಮ ಸತ್‌ಸಂಗದವರು ಬಹಳ ದಿನದಿಂದ ನನ್ನನ್ನು ಕೇಳುತ್ತಿದ್ದರು, ನಿಮ್ಮ ಕಡೆ ಊರನ್ನು ನೋಡಬೇಕೆಂದು ಅವರ ಇಷ್ಟದಂತೆ, 20 ಜನ ಒಂದು ವ್ಯಾನಿನಲ್ಲಿ ಪ್ರವಾಸ ಹೊರಟೆವು. ಪಂಜಾಬಿ, ಮರಾಠಿ, ಸಿಂಧಿಗಳ ಜೊತೆ ಕನ್ನಡದವಳು ನಾನು ಮಾತ್ರ. ಏರ್ಪಾಟು ಚೆನ್ನಾಗಿ ಮಾಡಿದ್ದೆವು. ಮೊದಲ ಪ್ರವಾಸ ಬೆಂಗಳೂರು. ಅಲ್ಲಿ ಲಾಲ್‌ಬಾಗ್, ವಿಧಾನ ಸೌಧ, ಮಾವಳ್ಳಿ ಟಿಫನ್ ರೂಂ ಎಲ್ಲಾ ಚೆನ್ನಾಗಿ ಅನುಭವಿಸಿದರು. ನೋಡೋಂತ ಜಾಗವೆಲ್ಲಾ ಮೂರು ದಿನ ಚೆನ್ನಾಗಿ ಸುತ್ತಿ ಜೊತೆಗೆ ಮಸಾಲೆ ದೋಸೆ ಯಾವ ಯಾವ ಜಾಗದಲ್ಲಿ ಸಿಕ್ಕುತ್ತೋ ಅಲ್ಲೆಲ್ಲಾ ಚೆನ್ನಾಗಿ ತೃಪ್ತಿಯಾಗಿ ತಿಂದರು. ಈ ಮಧ್ಯೆ ಎಳನೀರನ್ನು ಅಷ್ಟೇ ಇಷ್ಟಪಟ್ಟು ಕುಡಿಯುತ್ತಿದ್ದರು. ಅಲ್ಲಿಂದ ಮೈಸೂರಿನಲ್ಲಿ ಚಾಮುಂಡಿಬೆಟ್ಟ, ಕನ್ನಂಬಾಡಿ, ಅರಮನೆ ಅಂತೂ ಎಲ್ಲಾ ನೋಡಿ ಬಹಳ ಸಂತೋಷಪಟ್ಟರು. ಮೊದಲೆ ಮೈಸೂರಿನ ಅಡಿಗೆ ತಿಂಡಿಯನ್ನು ಕೇಳಿ ತಿಳಿದಿದ್ದರು. ಅಲ್ಲಿಯ ಸೆಟ್‌ದೋಸೆ ಮತ್ತು ಬಿಸಿಬೇಳೆ ಹುಳಿಯನ್ನ ಇಷ್ಟಪಟ್ಟರು. ಆದ್ರೆ ಅವರಿಗೆ ನಮ್ಮ ಅಡಿಗೆ ಕಾರ ಅಂತ ಹೇಳಿ ಕಾರ ಕಡಿಮೆ ಮಾಡಿ ಅಂತ ಅದನ್ನೇ ಕೇಳಿ ಮಾಡಿಸಿಕೊಂಡರು. ಜೊತೆಗೆ ಮೈಸೂರಪಾಕ್ ಅವರಿಗೆಲ್ಲಾ ಇಷ್ಟ ಆಯ್ತು. ಮೈಸೂರು ಸುತ್ತ-ಮುತ್ತಾ ಎರಡು ದಿನ ಸುತ್ತಾಡಿ ಶ್ರವಣಬೆಳಗೊಳ, ಬೇಲೂರು ನೋಡಿದೆವು. ಶ್ರವಣಬೆಳಗೊಳದ ಗೊಮ್ಮಟನನ್ನು ನೋಡಿ ಅವರುಗಳು ಕಲ್ಲಾಗೇ ನಿಂತುಬಿಟ್ಟಿದ್ದರು, ಕೆಲವು ನಿಮಿಷ. ಆಮೇಲೆ `ಅಬ್ಬ'ಅಂತ ಉಸಿರುಬಿಟ್ಟರು. ಎಷ್ಟು ಚೆನ್ನಾಗಿದೇಂತ ಖುಷಿಪಟ್ಟರು. ಅಲ್ಲಿಂದ ಬೇಲೂರಿನಲ್ಲಿ ಮತ್ತು ಹಳೇ ಬೀಡಿನಲ್ಲಿ ಅಲ್ಲಿಯ ಗೈಡ್ ತೋರಿಸಿದರು.

ಅಲ್ಲಿಯ ದೇವಸ್ಥಾನದವರಿಗೆ ಹೇಳಿ ಪುಳಿಯೋಗರೆ, ಪೊಂಗಲ್ ಮೊಸರನ್ನದ ಪ್ರಸಾದ ಕೊಡಿಸಿದರು. ತುಂಬಾ ರುಚಿಯಾಗಿತ್ತು. ನಮ್ಮ ಅಡಿಗೆ ಬಹಳ ಇಷ್ಟ ಪಟ್ಟರು. ನಮ್ಮ ಸ್ನೇಹಿತರಲ್ಲಿ ಚಿಕ್ಕ ವಯಸ್ಸಿನವರಿಕೆಲ್ಲಾ ಶಾಂತಲೆಯ ನಾಟ್ಯಭಂಗಿ ಹೀಗಿತ್ತು, ಹಾಗಿತ್ತು ಅಂತ ಅಭಿನಯ ಅವರಿಗೆ ತಿಳಿದ ಮಟ್ಟಿಗೆ ಮಾಡಿ ತೋರಿಸುತ್ತಾ ನಮಗೆಲ್ಲಾ ಸಂತೋಷ ಪಡಿಸಿದರು. ಅಲ್ಲಿಂದ ಹೊರಟವರು, ಊರು ಹತ್ತಿರ ಬಂದಾಗ ಎಲ್ಲರೂ ಸುಸ್ತಾಗಿದ್ದರು. ದಾರಿಯಲ್ಲಿ ಸಣ್ಣದೊಂದು ಸೇತುವೆ ಇತ್ತು. ಅದರ ಹತ್ತಿರ ಮೂರು ಜನ ಕೂತಿದ್ದರು. ಅವರುಗಳು ಕೂತಿದ್ದ ತರಹ ನೋಡಿ ನಮಗೆಲ್ಲಾ ತಮಾಷೆ ಎನ್ನಿಸಿ ನಮ್ಮ ವ್ಯಾನನ್ನು ನಿಲ್ಲಿಸಿ ಎಲ್ಲರೂ ಕೆಳಗೆ ಇಳಿದೆವು. ನಮ್ಮನ್ನೆಲ್ಲಾ ನೋಡಿ ಏನು ಬೇಕೂಂತ ಕೇಳಿದರು. "ನಾವೇ ನಿಮ್ಮನ್ನು ಯಾಕೆ ಮೂರು ಮಂದಿಯು ಹೀಗೆ ಕೂತಿದ್ದೀರಿ ಅಂತ ಕೇಳಕ್ಕೆ ಬಂದೆವು" ಅಂದೆವು. ಅವರು ನಮಗೆ ಹೇಳೋಕ್ಕೆ ಶುರುಮಾಡಿದರು.

ಅಷ್ಟರಲ್ಲಿ ಹತ್ತಿರದಲ್ಲಿದ್ದ ರೈತನೊಬ್ಬನು ಓಡಿ ಬಂದನು. ಅವರುಗಳೆಲ್ಲ ಅಲ್ಲಿ ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದರು. ಎಲ್ಲಾ ಕೆಲಸವನ್ನು ಮಾಡಿ ಮುಗಿಸಿದ್ದರು. ಕೊನೆಗೆ ಎಲೆಕ್ಟ್ರಿಕ್ ತಂತಿಯನ್ನು ಆ ಡೊಂಕು ಪೈಪ್‌ನೊಳಗೆ ಹಾಕಲು ಸಾಧ್ಯವಾಗದೆ ತಲೆ ಮೇಲೆ ಕೈ ಹೊತ್ತುಕೊಂಡು ಕುಳಿತ್ತಿದ್ದರು. ಆಗ ರೈತನು `ನಾನು ತೋರಿಸಲಾ ಬುದ್ಧಿ' ಎಂದಾಗ ಎಲ್ಲರೂ ಗೊಳ್ಳೆಂದು ನಕ್ಕು ನಾವಿಷ್ಟು ಓದಿದವರೇ ಒದ್ದಾಡುತ್ತಿರುವಾಗ ಇವನು ತೋರಿಸುತ್ತಾನಂತೆ ಎಂದರು. ಈ ಮಾತನ್ನು ಕೇಳಿದ ತಕ್ಷಣ ರೈತನು ತನ್ನ ಗುಡಿಸಲಿಗೆ ಹೋಗಿ ಇಲಿ ಬೋನನ್ನು ತೆಗೆದುಕೊಂಡು ಬಂದನು. "ಸ್ವಾಮೇರ ನಿಮ್ಮ ತಂತಿಯನ್ನು ಕೊಡೀಂತ ಕೇಳಿ ತಕ್ಷಣ ಇಲಿಯ ಬಾಲಕ್ಕೆ ತಂತಿಯನ್ನು ಕಟ್ಟಿ ಡೊಂಕು ಪೈಪಿನಲ್ಲಿ ಬಿಟ್ಟನು. ತಕ್ಷಣ ಇಲಿ ಆ ಕಡೆಯಿಂದ ಈ ಕಡೆಗೆ ಹೊರಟು ಹೋಯಿತು. ತಕ್ಷಣ ರೈತನು ಪೈಪಿನ ಇನ್ನೊಂದು ತುದಿಗೆ ಬಂದು, ಇಲಿಯ ಬಾಲದಿಂದ ತಂತಿಯನ್ನು ಬಿಡಿಸಿಕೊಂಡನು. ಅಲ್ಲಿದ್ದವರಿಗೆಲ್ಲಾ ಪರಮಾಶ್ಚರ್ಯ. ಆಫೀಸರು ಗಳಂತೂ ರೈತನನ್ನು ಎಷ್ಟೋ ಅಷ್ಟೊ ಹೊಗಳಿದರು. ಸ್ವಾಮೇರು ನೀವೆಲ್ಲಾ ಬನ್ನಿ ನಮ್ಮ ಆಲೇ ಮನೇಗೇಂತ ಜಾಗ ತೋರಿಸಿ ನಮ್ಮನ್ನೆಲ್ಲಾ ಕರೆದನು ನಾವುಗಳೆಲ್ಲಾ ಆಲೇ ಮನೆಗೆ ಹೋದೆವು. ಸ್ವಲ್ಪ ಹೊತ್ತಿಗೆ ಆಲೆಮನೆ ಯಜಮಾನರು ಬಂದರು. ಅವರ ಸಂಗಡಿಗರೊಂದಿಗೆ, ನಮ್ಮನ್ನು ಒಂದು ಕ್ಷಣ ನೋಡಿ 'ಅರೆ, ನೀನು ಮೂರ್ತಿ ಮಗಳಲ್ಲವೇ' ಎಂದರು. ಅಷ್ಟರಲ್ಲಿ ನನಗೂ ಸ್ವಲ್ಪ ನೆನಪಿಗೆ ಬಂದು "ನೀವು ರಾಮಣ್ಣನವರಲ್ಲವೇ?" ಎಂದೆನು. 'ಹೌದಮ್ಮಾ ನಿನಗೆ ನೆನಪಿಗೆ ಬಂದೆ'ನಲ್ಲಾಂತ ಸಂತೋಷಪಟ್ಟರು. ನಮಗೆಲ್ಲಾ ಕಬ್ಬಿನ ಹಾಲಿನ ಸಮಾರಾಧನೆ ನಡೆಯುತ್ತಿರುವಾಗ, ನಮ್ಮ ಸಂಗಡವರನ್ನೆಲ್ಲಾ ಪರಿಚಯ ಮಾಡಿಸಿದೆ. ಅವರೆಲ್ಲಾ ನಮ್ಮ ಕರ್ನಾಟಕ ನೋಡಬೇಕೂಂತ ಆಸೆ ಪಟ್ಟರು. ವ್ಯಾನಿನಲ್ಲಿ ಬಂದಿದ್ದೇವೆ. ಬೆಂಗಳೂರು, ಮೈಸೂರು, ಶ್ರವಣಬೆಳಗೊಳ, ಬೇಲೂರು ಹಳೇಬೀಡು ತೋರಿಸಿದ್ದಾಯ್ತು. ಚಿಕ್ಕ ಮಗಳೂರಿನ ಹತ್ತಿರ ನೋಡಿಕೊಂಡು ಮುಂಬಯಿಗೆ ಹೊರಡುತ್ತೇವಂತ ನಮ್ಮ ವಿಚಾರ ತಿಳಿಸಿದೆವು. ಅವರು ಅದರ ಮಧ್ಯೆ ಇನ್ನೂ ಒಂದು ನಿಮ್ಮ ಸ್ನೇಹಿತರಿಗೆ ತೋರಿಸಿ ನಮ್ಮ ಆತಿಥ್ಯ ಪಡೆಯಬೇಕೂಂತ ನಮ್ಮ ಸಂಗಡಿಗರನ್ನು ಕೇಳಿಕೊಂಡರು. ಅವರ ಮೊಮ್ಮಗಳ ಮದುವೆಗೆ ನಮ್ಮನ್ನು ನಿಲ್ಲಿಸಿಕೊಂಡರು. ನಮ್ಮ ಸ್ನೇಹಿತರಿಗೆ ಖುಷಿಯೋ ಖುಷಿ ನಿಮ್ಮ ಕಡೆಯ ಮದುವೆಯನ್ನು ನೋಡಿದ ಹಾಗಾಯ್ತು ಅಂತ.

ಅವರ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು. ನಮಗೆ ಪ್ರತ್ಯೇಕವಾಗಿ ಯಾವುದಕ್ಕೂ ತೊಂದರೆ ಆಗದ ಹಾಗೆ ಚೆನ್ನಾಗಿ ಏರ್ಪಾಟು ಮಾಡಿದ್ದರು. ಮಾರನೇ ದಿನ ಮದುವೆ ಕಾರ್ಯಕ್ರಮ ಶುರು ಆಯ್ತು. ನಮ್ಮವರಿಗೆಲ್ಲಾ ಈ ಮದುವೆ ಹೊಸನೋಟ ಆಗಿತ್ತು. ಬೀಗರು ಬರುವುದು, ಅವರಿಗೆ ಪ್ರತ್ಯೇಕ ಮನೆ, ತಿಂಡಿಯಂತೂ ತರಹ ತರಹದ್ದು. ವರಪೂಜೆ, ರಾತ್ರೆ ಊಟ. ಅವರಿಗೆಲ್ಲಾ ಬಾಳೆಲೆ ಊಟ ಹೊಸದು. ಟೇಬಲ್ಲೂ ಇತ್ತು. ಆದರೂ ನಮಗೆ ಇದು ಹೊಸ ತರಹ ಅಂತ ಖುಷಿಯಿಂದ ಊಟ ತಿಂಡಿ ಮಾಡಿದರು. ನಾವೆಲ್ಲಾ ನಮ್ಮ ಬಿಡದಿಗೆ ಬಂದೆವು. ಬೆಳಗ್ಗೆ ಬೇಗ ಮುಹೂರ್ತ ಇತ್ತು. ಸುತ್ತಿ ಆಯಾಸವೂ ಆಗಿತ್ತು. ಒಳ್ಳೇ ನಿದ್ದೆ ಬಂತು. ಓಲಗದ ಶಬ್ದ ಆದಾಗಲೇ ನಾವೆಲ್ಲಾ ಚುರುಕಾಗಿ ಹೊರಟೆವು. ಕಾಫಿ ತಿಂಡಿ ಪೂರೈಸಿದವರು. ಕಾಶಿಯಾತ್ರೆ ಬಗ್ಗೆ ಅದರ ವಿವರವನ್ನು ತಿಳಿಸಿದೆವು. ಅಲ್ಲಿಂದ ಹುಡುಗಿಯ ಸೋದರ ಮಾವಂದಿರು ಬಂದರು. ಇವರೆಲ್ಲಾ ಯಾರು ಅಂತ ನಮ್ಮೋರ ಸಮಸ್ಯೆಗೆ ಮದುವೆ ಹುಡುಗಿಯನ್ನು ಧಾರೆಗೆ ಕರೆದುಕೊಂಡು ಹೋಗುತ್ತಾರೆ. ಸೋದರ ಮಾವಂದಿರೂಂತ ತಿಳಿಸಿದೆವು. ಬಹುಮಟ್ಟಿಗೆ ಫೋಟೋಗಳನ್ನು ತೆಗೆದುಕೊಂಡು ನಾಗೋಲಿ ಅರ್ಥಗಳನ್ನು ಕೇಳಿ ತಿಳಿದುಕೊಂಡರು.

ವಧೂವರರಿಗೆ ಶುಭಾಶಯ ಹೇಳಿ, ಊಟ ಮಾಡಿಕೊಂಡು ಹೊರಟೆವು ದಾರಿಗೆ ಬೇಕಾದಷ್ಟು ತಿಂಡಿ ಊಟ ಈ ಮಧ್ಯೆ ಪೂರಿ ಸಾಗೂ ಸಹ ಪ್ಯಾಕ್ ಮಾಡಿಸಿ ವ್ಯಾನಿನಲ್ಲಿ ಇಟ್ಟು, ನಮಗೆಲ್ಲರಿಗೂ ಉಡುಗೊರೆಯನ್ನು ಕೊಟ್ಟು ಬೀಳ್ಕೊಟ್ಟರು. ನಮಗೆ ದಾರಿ ಉದ್ದಕ್ಕೂ ಅವರ ಆದರೋ ಪಚಾರಕ್ಕೆ ಮಾರುಹೋಗಿ ನಾವೂನೂ ಬೊಂಬಾಯಿಗೆ ಹೊರಟೆವು. ದಾರಿಯಲ್ಲಿ, ಕೆಮ್ಮಣ್ಣುಗುಂಡಿ, ಬಾಬಾಬುಡನ್‌ಗಿರಿ, ದತ್ತಾತ್ರೇಯ ಪೀಠ, ಮಾಣಿಕ್ಯಧಾರೆ ನೋಡಿಕೊಂಡು ಕೊಲ್ಲಾಪುರದಲ್ಲಿ ನಿಂತು ಆ ರಾತ್ರೆ ಮಹಾಲಕ್ಷ್ಮಿ ದರುಶನ ಮಾಡಿಕೊಂಡು ಮೂರನೆದಿನ ಮುಂಬಯಿ ಸೇರಿದೆವು. ನಮ್ಮ ಕರ್ನಾಟಕ ಪ್ರವಾಸ ಸವಿನೆನಪಾಗಿದೇಂತ ನಮ್ಮ ಸತ್‌ಸಂಗದವರೆಲ್ಲಾ ದಿನಕ್ಕೊಮ್ಮೆ ನೆನಪು ಮಾಡಿಕೊಳ್ಳುತ್ತಾರೆ. ●


# Matrimonial

Proposal invited for well placed professionally qualified 24 years smarth Brahmin girl 5'7½ M.A. (Eco) Post Graduate Diploma in Systems Management. Working in TISS Bombay project Jeshta Nakshtra 4 pada, Kasshyapa Gotra, Homa loving good family background. Contact Mumbai Tel.: 555 9380 to write to Nesaru Box No 156.

***

Alliance invited of M.S. Computer Engg. Professional working in U.S.A. HI, visa, smarth Brahmin boy 25/6' visiting April 98 parent place settled in mumbai from good looking, fair complexion, smart slim height 5.3" to 5.9" smarth/madhwa bride graduate in Engg./Dentist/Law, age 23 or below willing to settle in USA. Sent Photo/ horoscope particular to Nesaru Box No. 157

***

Suitable groom for Shivalli Madhwa Brahmin girl, vishwamitra gotra age 25 years, fair complexion height 5' education B.Sc., MBA. Please contact U.S. Acharya on telephone nos. 411 15 02 or 416 01 78

***

Matrimonial alliance invited for a fair, slim, 26 years old years old, 5', Kannada kota Brahmin girl, Vashista gotra, Mriga Nakashtra. B.Com., Diploma in beauty therapy. Boy qualified employed, below 32 preferable, fair handsome, Mumbai based, from good family background. With details write to Nesaru Box No. 159.

***

Parents invite matrimonial alliance for very highly placed in USA triple M.S., Ph.D (USA) Iyenger, Bharadwaja / Swati 160 Cms., Feb 4, 1964 born very good looking girl. Highly qualified Doctors, Engineers, M.B.A's - Iyengar bachelors 34-35. USA/U.K./ India. Write to Nesaru Box No. 160

# ಅಸೋಸಿಯೇಷನ್ನಿನಲ್ಲಿ ನಡೆದ ಕಾರ್ಯಕ್ರಮಗಳು

ತಾ. 31-1-98ರಂದು "ಮಾಘೀ ಗಣಪತಿಯ ಜಯಂತುತ್ಸವವನ್ನು ಆಚರಿಸಲಾಯ್ತು.

ಆ ದಿನ ಬೆಳಿಗ್ಗೆ ಗಣಪತಿಗೆ ಅಭಿಷೇಕ ಪೂಜೆ ನಡೆಯಿತು. ಸಂಜೆ ಅಸೋಸಿಯೇಷನ್ನಿನ ಸದಸ್ಯರು ಸಾಕಷ್ಟು ಸಂಖ್ಯೆಯಲ್ಲಿ ಸಂಜೆಯ ಪೂಜೆ ಮಹಾಮಂಗಳಾರತಿಯಲ್ಲಿ ಭಾಗವಹಿಸಿದ್ದರು.

15-2-98ರಂದು ಸಂಜೆ ಡಾ. ಕೀರ್ತಿನಾಥ ಕುರ್ತುಕೋಟಿಯವರಿಂದ ರಚಿತವಾದ `ಆಮಿ'ಎಂಬ ನಾಟಕವನ್ನು ಡಾ. ಬಿ. ಆರ್. ಮಂಜುನಾಥ್‌ರವರ ನಿರ್ದೇಶನದಲ್ಲಿ ಆಡಲಾಯ್ತು.

ಈ ನಾಟಕದಲ್ಲಿ ಶ್ರೀ ರಂಗನಾಥ್, ಶ್ರೀಮತಿ ಭಾರತೀ ಪ್ರಸಾದ್, ಪುಟಾಣಿಗಳಾದ ಪ್ರಿಯಾಂಕಾ, ಶ್ವೇತ, ಪೂರ್ಣಿಮಾ, ಚಿತ್ರಾ, ಅಪರ್ಣ, ಕ್ಷಮಾ, ಶೃತಿ, ಶ್ರೀಧರ, ಪಂಕಜ್, ಕಿರಣ್, ಪ್ರದ್ಯೋತ್ ಮತ್ತು ಶಶಾಂಕ್ ಭಾಗವಹಿಸಿದ್ದರು. ಮಕ್ಕಳ ನಾಟಕವಾದ ಇದರಲ್ಲಿ ಪುಟಾಣಿಗಳೆಲ್ಲಾ ಬಹಳ ಉತ್ಸಾಹದಿಂದಲೂ ಸಡಗರದಿಂದಲೂ ನಾಟಕಕ್ಕೆ ಕಳೆ ತಂದರು.

ಆಸೋಸಿಯೇಷನ್ನಿನಲ್ಲಿ ನಡೆದ ಆಟೋಟ ಸ್ಪರ್ಧೆ ಹಾಗೂ ಪ್ರತಿಭಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನಗಳಿಸಿದವರಿಗೆ ಶ್ರೀಮತಿ ಲಲಿತಾ ದೊರೆಸ್ವಾಮಿಯವರಿಂದ ಬಹುಮಾನ ವಿತರಣೆಯನ್ನು ಮಾಡಲಾಯ್ತು.

ಕೆಲವು ವರ್ಷಗಳಿಂದ ನಿಂತುಹೋಗಿದ್ದ ಪ್ರತಿಭಾ ಸ್ಪರ್ಧೆ ಮತ್ತು ಕ್ರೀಡಾ ಸ್ಪರ್ಧೆಗಳನ್ನು ಈ ವರ್ಷದಿಂದ ಅಸೋಸಿಯೇಶನ್ನಿನಲ್ಲಿ ಪುನಃ ನಡೆಸಲಾಯಿತು.

ಡಿಸೆಂಬರ್ 27ರಂದು ಪ್ರತಿಭಾ ಸ್ಪರ್ಧೆ ಇದರಲ್ಲಿ ಕಿರಿಯರಿಂದ ಹಿರಿಯರ ವರೆಗೂ ವಯಸ್ಸಿಗೆ ತಕ್ಕಂತೆ



6ವರ್ಷ ಕೆಳಪಟ್ಟು 6ರಿಂದ 9, 10ರಿಂದ 14, 15ರಿಂದ 20, ಮತ್ತು 20ರಿಂದ ಮೇಲ್ಪಟ್ಟು ಹೀಗೆ ಗುಂಪುಗಳಾಗಿ ವಿಂಗಡಿಸಿ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಮೊದಲಿಗೆ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆಯಿತ್ತು. ನಂತರ ನಡೆದ ಸ್ಪರ್ಧೆಗಳು ಈ ರೀತಿ ಇದ್ದವು.

Fancy Dress -ಮಕ್ಕಳಿಗೆ

Story telling

ಚಲನ ಚಿತ್ರ ಗೀತೆಗಾಗಿ - ಎಲ್ಲಾ ವಯಸ್ಸಿನವರಿಗೂ

ದೇವರ ನಾಮ - "


ಈ ಎಲ್ಲಾ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಶ್ರೀಮತಿ ಸರೋಜ ಸಂಪತ್, ಶ್ರೀಮತಿ ಅಹಲ್ಯಾ ಚಿತ್ರರಂಜನ್ ಮತ್ತು ಶ್ರೀ ಸುಬ್ರಹ್ಮಣ್ಯ ಬಂದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಸ್ಪರ್ಧಾಳುಗಳು ತುಂಬಾ ಉತ್ಸುಕರಾಗಿ ಭಾಗವಹಿಸಿ ಕಾರ್ಯಕ್ರಮಕ್ಕೆ ಒಳ್ಳೆಯ ಮೆರಗು ತಂದು ಕೊಟ್ಟರು.

ಮೂರನೆಯ ದಿನ ಅಂದರೆ ಡಿಸೆಂಬರ್ 28 ಕ್ರೀಡಾ ಸ್ಪರ್ಧೆಯಿತ್ತು, ಇದರಲ್ಲೂ ಮಕ್ಕಳಿಂದ ವಯಸ್ಕರವರೆಗೂ ಆ ವರ್ಷದ ಕೆಳಪಟ್ಟು, 6ರಿಂದ 10, 10ರಿಂದ 15 ರಿಂದ 20, 20ರಿಂದ 30 ಮತ್ತು 30 ಮೇಲ್ಪಟ್ಟು ಹೀಗೆ ಗುಂಪುಗಳಾಗಿ ವಿಂಗಡಿಸಿ ಸ್ಪರ್ಧೆಗಳಿದ್ದವು. Running Race, Potato Race, Sack Race, Lemon on Spoon, Fast Wlaking, Shotput, Aining the Wicket ವಯಸ್ಸಿನ ಭೇದ ಭಾವವಿಲ್ಲದೆ ತುಂಬಾ ಹುಮ್ಮಸ್ಸಿನಿಂದ ಕ್ರೀಡಾ ಸಕ್ತರು ಭಾಗವಹಿಸಿದ್ದರು. ಮಧ್ಯದಲ್ಲಿ ತಂಪು ಪಾನೀಯ ನಂತರ ಕ್ರೀಡೆಗಳೆಲ್ಲಾ ಮುಗಿದ ಮೇಲೆ ಊಟದ ವ್ಯವಸ್ಥೆ ಇತ್ತು.



## 'ಆ ಮನಿ' ನಾಟಕದ ಕೆಲವು ದೃಶ್ಯಗಳು
















# ಸಂಮೋಹಿನಿ ಚಿಕಿತ್ಸೆ - 18

● ಡಾ| ಉಷಾರಾವ್

ಮಕ್ಕಳಲ್ಲಿ ವರ್ತನೆ ಹಾಗೂ ವ್ಯಕ್ತಿತ್ವಕ್ಕೆ ಸಂಬಂಧಿಸಿದ ತೊಂದರೆಗಳ ಚಿಕಿತ್ಸೆಯಲ್ಲಿ ಸಂಮೋಹಿನಿ ತಂತ್ರವನ್ನು ಬಳಸುವ ದಿಶೆಯಲ್ಲಿ ಹೆಚ್ಚು ಹೆಚ್ಚು ಆಸಕ್ತಿ ವ್ಯಕ್ತವಾಗುತ್ತಿದೆ. ಅತಿ ಚಿಕ್ಕ ವಯಸ್ಸಿನವರು ಬೇಗ ಟ್ರಾನ್ಸ್ ಸ್ಥಿತಿ (ವಶ್ಯಸುಪ್ತಿ) ತಲುಪುವರಾದರೂ, ಬಳಸಲಾಗುವ ತಂತ್ರವು ಮಗುವಿನ ಬೌದ್ಧಿಕ ಮಟ್ಟಕ್ಕೆ ಹೊಂದುವಂತಿರಬೇಕು. ಮಂದಬುದ್ಧಿಯ ಮಕ್ಕಳನ್ನು ಸುಲಭವಾಗಿ ಟ್ರಾನ್ಸ್ ಸ್ಥಿತಿಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ. ಅಂತಹ ಮಕ್ಕಳು ಪ್ರಾರಂಭದ ಹಂತದಲ್ಲಿ ಕಷ್ಟಕರವಾಗಿ ಕಂಡರೂ, ಒಮ್ಮೆ ಅವರ ಹೆದರಿಕೆ ನಿವಾರಣೆಯಾಯಿತೆಂದರೆ ಅವರು ಚಿಕಿತ್ಸೆಯಲ್ಲಿ ಬಹಳ ಮಟ್ಟಿಗೆ ಆಸಕ್ತಿ ತೋರುವರು ಹಾಗೂ ಚೆನ್ನಾಗಿ ಸ್ಪಂದಿಸುವರು. ವಾಸ್ತವವಾಗಿ ತೊದಲುವ ವ್ಯಕ್ತಿಯನ್ನು ನೇರ ಸೂಚನೆಗಳ ಮೂಲಕ ಸುಲಭವಾಗಿ ಗುಣಪಡಿಸಬಹುದು. ಆದರ ಸಾಧಾರಣ ಅನುಭವದಲ್ಲಿ ಇದು ಸಾಮಾನ್ಯವಾಗಿ ಸಂಭವಿಸುತ್ತಿಲ್ಲ. ಇದಕ್ಕೆ ಕಾರಣ ಅವರ ಅಭ್ಯಾಸಗಳಿಗೆ ಆಳವಾದ ಕಾರಣಗಳಿರಬಹುದು ಮತ್ತು ಅದು ಮುಂದೆ ನ್ಯೂರೋಸಿಸ್‌ಗೆ (ನರವ್ಯಾಧಿ) ಹಾದಿ ಮಾಡುವುದು.

ಮಕ್ಕಳ ಚಿಕಿತ್ಸೆ ಜಟಿಲವಾದದ್ದು. ಏಕೆಂದರೆ ಬಹುತೇಕ ಎಲ್ಲ ಮಕ್ಕಳು ತಮ್ಮ ತಾಯಿ ತಂದೆಯರೊಂದಿಗೆ ಅಥವಾ ಕುಟುಂಬದ ಇತರರೊಂದಿಗೆ ಭಾವನಾತ್ಮಕವಾಗಿ ತೊಡಗಿಕೊಂಡಿರುವರು, ಮತ್ತು ಅವರ ಧೋರಣೆಗಳು ಅವನ/ಅವಳ ತೊಂದರೆಗಳಿಗೆ ಕಾರಣವಾಗಿರುವುವು; ಅವುಗಳನ್ನು ಆಮೂಲಾಗ್ರವಾಗಿ ಬದಲಾಯಿಸಿದ ಹೊರತು ಪರಿಸ್ಥಿತಿ ಹಾಗೆಯೇ ಮುಂದುವರಿಯುವುದು ಖಂಡಿತ. ಆದುದರಿಂದ ನಾವು ಎಷ್ಟೇ ಕೌಶಲ್ಯದಿಂದ ಹಾಗೂ ಯಶಸ್ವಿಯಾಗಿ ಮಕ್ಕಳಿಗೆ ಸಂಮೋಹಿನಿ ಚಿಕಿತ್ಸೆ ನೀಡಲು ಪ್ರಯತ್ನಿಸಿದರೂ ಅದರ ಫಲಿತಾಂಶ ಪರಿಮಿತವಾಗಿರುತ್ತದೆ. ಆದುದರಿಂದ ಮಗು ತನ್ನನ್ನು ಬಾಧಿಸುತ್ತಿರುವ ತೊಂದರೆಗಳಿಂದ ಪಾರಾಗಬೇಕಾದರೆ ತಾಯಿ ತಂದೆಯರು ಸಹಕರಿಸಬೇಕು. ವಾಸ್ತವವಾಗಿ ಯಾವುದೇ ಮಗುವಿಗೆ ತಂದೆ ತಾಯಿಯರ ಒಪ್ಪಿಗೆ ಇಲ್ಲದೆ ಚಿಕಿತ್ಸೆ ಮಾಡಕೂಡದು, ಮತ್ತು ಸಂಮೋಹಿನಿಯನ್ನು ಬಳಸುವುದಾದರೆ ಮೊದಲೇ ಈ ವಿಷಯವನ್ನು ಅವರಿಗೆ ಸ್ಪಷ್ಟಪಡಿಸಬೇಕು. ಸಂಮೋಹಿನಿಯಿಂದ ಯಾವ ಅಪಾಯವೂ ಇಲ್ಲ ಹಾಗೂ ಚಿಕಿತ್ಸೆಯ ವೇಳೆಯಲ್ಲಿ ಮಗು ಹಿಪ್ನೋಥೆರಪಿಸ್ಟರೊಂದಿಗೆ ನಿಕಟ ಸ್ನೇಹ ಬೆಳೆಸಿಕೊಂಡರೂ ಅದರಿಂದ ಮಗುವಿಗೆ ಯಾವ ಹಾನಿಯೂ ಆಗುವುದಿಲ್ಲ ಎಂದು ವಿವರಿಸಬೇಕು.

ಸಂಮೋಹಿನಿ ಎಂಬುದು ಒಂದು ಮನಸ್ಸು ಇನ್ನೊಂದರ ಮೇಲೆ ಹತೋಟಿ ಗಳಿಸುವುದು ಅಥವಾ ಯಾವುದೇ ಪ್ರಭಾವ ಬೀರುವ ವಿಷಯವಲ್ಲ. ಮಗುವಿಗೆ ಆರಾಮ (ರಿಲ್ಯಾಕ್ಸ್) ಹಾಗೂ ಸುಭದ್ರತೆಯ ಭಾವನೆ ಉಂಟುಮಾಡಿ ಅದರ ಉದ್ವೇಗ ಹಾಗೂ ಕಾತರವನ್ನು ನಿವಾರಿಸುವುದಕ್ಕಷ್ಟೇ ಇದು ಸೀಮಿತವಾದುದು. ಮಗುವಿಗೆ ಆರಾಮ ಸ್ಥಿತಿ ಉಂಟುಮಾಡಿ, ಇನ್ನು ಮುಂದೆ ನೀನು ಹಾಸಿಗೆ ಒದ್ದೆ ಮಾಡಿಕೊಳ್ಳುವುದಿಲ್ಲ ಎಂದೋ ಅಥವಾ ಉಗುರು ಕಚ್ಚುವುದಿಲ್ಲ ಎಂದೋ ಸೂಚನೆಗಳನ್ನು ನೀಡುವುದಷ್ಟೇ ಚಿಕಿತ್ಸೆಯಲ್ಲ, ಹಾಸಿಗೆ ಒದ್ದೆ ಮಾಡಿಕೊಳ್ಳುವುದು, ಉಗುರು ಕಚ್ಚುವುದು ಅಥವಾ ಬೆರಳು ಚೀಪುವುದು ಕೇವಲ ಉದ್ವೇಗ ಮತ್ತು ಕಾತರತೆಯ ಒಂದು ಚಿಹ್ನೆಯಷ್ಟೇ. ಮತ್ತು ಇವು ಕೆಲವೊಮ್ಮೆ ಸಂಬಂಧಗಳು ಹಾಗೂ ಭಾವೋದ್ರೇಕದ ಪರಿಸರದಿಂದಾಗಿ ಅಥವಾ ಪ್ರಾಯಶಃ ಕಲ್ಪನೆಯಿಂದಾಗಲೀ ಸಂಭವಿಸಬಹುದು. ಆದರೆ ಇದನ್ನು ಸರಿಯಾಗಿ ನಿರ್ಣಯಿಸಿರುವುದಿಲ್ಲ; ಮತ್ತು ಈ ವಿಚಾರಗಳು ಹಾಗೂ ಭಾವನೆಗಳನ್ನು ಸ್ಪಷ್ಟೀಕರಿಸಿದಾಗ ಹಾಗೂ ವ್ಯಕ್ತಪಡಿಸಿದಾಗ, ಅವುಗಳನ್ನು ಸರಿಹೊಂದಿಸುವ ಅಗತ್ಯವಿದ್ದರೆ ಅವುಗಳ ಬಗೆಗೆ ಚರ್ಚಿಸಬೇಕು. ಈ ಪ್ರಾಥಮಿಕ ಅಂಶಗಳು ಜಟಿಲ ಹಾಗೂ ಪ್ರಾಯಶಃ ಅತಿಯಾದವು ಎಂದು ತೋರಬಹುದು, ಮತ್ತು ತಾಯಿ ಅಥವಾ ತಂದೆ ಸ್ನೇಹಪರರಾಗಿದ್ದು ಸಹಕರಿಸುವಂಥವರಾಗಿದ್ದರೆ ಅವರಿಗೆ ಪ್ರಾಸ್ತಾವಿಕವಾಗಿ ಈ ವಿಷಯ ತಿಳಿಸಬಹುದು. ಆದರೆ ಬಿಚ್ಚು ಮನಸ್ಸು ಹಾಗೂ ಪರಸ್ಪರ ವಿಶ್ವಾಸ ತೃಪ್ತಿಕರ ಚಿಕಿತ್ಸೆಗೆ ಬಹಳ ಅಗತ್ಯ.

ಬೆಳೆದವರಲ್ಲಿರುವಂತೆಯೇ, ಸಂಮೋಹಿನಿ ತಂತ್ರದ ಮೂಲಕ ಉಂಟುಮಾಡಲಾದ ಆರಾಮ (ರಿಲ್ಯಾಕ್ಸೇಷನ್) ಮಗುವಿಗೆ ತನ್ನ ಭಾವನೆಗಳು ವಿಚಾರಗಳು ಹಾಗೂ ಘಟನೆಗಳನ್ನು ಚರ್ಚಿಸಲು ಹಾಗೂ ಅವುಗಳ ಬಗೆಗೆ ಸ್ಪಷ್ಟವಾಗಿ ಗ್ರಹಿಸಲು ಅವಕಾಶ ಒದಗಿಸುವುದು. ಸಂಮೋಹಿನಿಗೆ ಮುಂಚೆ ಅಪರಾಧ ಭಾವ ಹಾಗೂ ನಾಚಿಕೆಯ ತೆರೆ ಸರಿಸದೆ ಈ ಬಗೆಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಈ ಸ್ವಾತಂತ್ರ್ಯ ಚಿಕಿತ್ಸೆ ಪೂರ್ತಿಗೊಂಡ ಬಳಿಕವೂ ಮುಂದುವರಿಯುತ್ತದೆ. ವಶ್ಯಸುಪ್ತಿ ಸ್ಥಿತಿಯಲ್ಲಿ ಶಾಶ್ವತವಾಗಿ ವಿಚಾರ ಹಾಗೂ ಭಾವೋನ್ಮಾದವನ್ನು ಸಡಿಲಿಸುವ ಯಾವುದೋ ಒಂದು ಅಂಶವಿರುವುದು. ಅದು ರೋಗಿ ಹಾಗೂ ಸಂಮೋಹಿನಿ ಚಿಕಿತ್ಸಕ ಇಬ್ಬರಲ್ಲೂ ವಿಶ್ವಾಸ ಮತ್ತು ಸಹಾನುಭೂತಿಯ ಅನುಭವವನ್ನು ಸೃಷ್ಟಿಸಿದೆಯೇನೋ ಎಂಬ ರೀತಿಯಲ್ಲಿ ಅದು ಕಾರ್ಯ ನಿರ್ವಹಿಸುವುದು.

ತಮ್ಮ ಮಗು ಒಂದು ಸಮಸ್ಯೆಯನ್ನು ಮುಂದಿಟ್ಟಾಗ ತಾಯಿ ತಂದೆಯರಲ್ಲಿ ಸದಾ ಇರುವ ಕಾತರ ಹಾಗೂ ಅಪರಾಧ ಪ್ರಜ್ಞೆಯನ್ನು ನಿವಾರಿಸಲು ಎಲ್ಲ ಪ್ರಯತ್ನವನ್ನೂ ಮಾಡಬೇಕು. ಧೋರಣೆ ಮೃದು ದಯಪೂರ್ಣವಾಗಿರಬೇಕು. ರೋಗಿ ಹೇಳುವ ಕಷ್ಟದ ಕಥೆಯನ್ನು ಸಹನೆಯಿಂದ, ಸಹಾನುಭೂತಿಯಿಂದ ಕೇಳಲು ಸಿದ್ಧವಾಗಿರಬೇಕು. ತಾಯಿ ತಂದೆಯರು ಸಾಮಾನ್ಯವಾಗಿ ತಮ್ಮ ಕೈಲಾದುದನ್ನೆಲ್ಲ ಮಾಡಿರುತ್ತಾರೆ. ಫಲಿತಾಂಶ ತೃಪ್ತಿಕರವಾಗಿಲ್ಲದಿದ್ದರೆ ಸುಮ್ಮನೆ ಅಪರಾಧದ ಮೇಲೆ ಅಪರಾಧ ಹೊರಿಸುವುದರಿಂದ ಯಾವ ಪ್ರಯೋಜನವೂ ಇಲ್ಲ. ತಪ್ಪು ಮಾಡಲಾಗಿದೆ, ಆದರಿಂದ ಮಗು ಕಷ್ಟ ಅನುಭವಿಸಿದೆ ಎಂಬುದು ತಾಯಿ ತಂದೆಯರಿಗೆ ಚೆನ್ನಾಗಿ ಗೊತ್ತಿರುತ್ತದೆ. ತನ್ನ ಮಗುವಿನ ಬಗೆಗೆ ಚರ್ಚಿಸಲು ಬಂದ ತಾಯಿ ಶಾಲೆಯಲ್ಲಿ ಅವನ / ಅವಳ ನಿರ್ವಹಣೆ ಬಗೆಗೆ ಆಪಾದನೆಗಳ ಪಟ್ಟಿಯನ್ನೇ ಹೇಳುತ್ತ ಹೋದಾಗ ಸಹನೆಯಿಂದ ಕೇಳುವುದು ಕಷ್ಟದ ಕೆಲಸ. ಮಗುವನ್ನು ಸರಿಯಾಗಿ ನೋಡಿಕೊಳ್ಳದಿರುವುದು ಹಾಗೂ ಅದನ್ನು ಅರ್ಥಮಾಡಿಕೊಳ್ಳದಿರುವುದು ಈ ಎಲ್ಲ ತೊಂದರೆಗಳ ಮೂಲ, ಇಲ್ಲದಿದ್ದಲ್ಲಿ ಅದು ಯಾವ ತೊಂದರೆಯನ್ನು ಮಾಡುತ್ತಿರಲಿಲ್ಲ ಎಂದು ಖಂಡತುಂಡವಾಗಿ ಹೇಳುವುದೂ ಕೆಲವು ಸಲ ಕಷ್ಟವಾಗುವುದು. ಆಪಾದನೆಗಳ ಪ್ರವಾಹ ಇಳಿಮುಖವಾಗುವವರೆಗೆ ಸಹನೆಯಿಂದಿದ್ದರೆ ಕೊನೆಗೆ ಅದರಿಂದ ಪ್ರತಿಫಲ ದೊರೆಯುವುದು. ಕೆಲವು ಸಂದರ್ಭಗಳಲ್ಲಿ ತಾಯಿ ತಂದೆಯರು ಪಕ್ಷಪಾತ ಮನೋಭಾವದವರಾಗಿರಬಹುದು. ಅಂಥ ಸಂದರ್ಭಗಳಲ್ಲಿ ಅವರೊಂದಿಗೆ ನಿಧಾನವಾಗಿ ಹಾಗೂ ಸಹಾನುಭೂತಿಯಿಂದ ವಿಷಯಗಳ ಬಗೆಗೆ ಚರ್ಚಿಸಲು ಹಲವು ಸಲ ಭೇಟಿಯಾಗಲು ವ್ಯವಸ್ಥೆ ಮಾಡಬೇಕು. ಅದಕ್ಕೆ ಪ್ರತಿಯಾಗಿ ಸರಿಸುಮಾರು ಸಹಜ ಮಕ್ಕಳೊಂದಿಗೆ, ಮುಖ್ಯವಾಗಿ ಅಸಹಕಾರ ಮನೋಭಾವದ ಹಿರಿಯರ

ಧೋರಣೆಯಿಂದಾಗಿ ತೊಂದರೆಗೊಳಗಾಗಿರುವ ಬೆಳೆದ ಮಕ್ಕಳೊಂದಿಗೆ ವ್ಯವಹರಿಸುವಾಗ, ಸ್ವಲ್ಪಮಟ್ಟಿಗೆ ಅವರ ಕಾತರವನ್ನು ನಿವಾರಿಸಲು ಸಾಧ್ಯವಾಗುವುದು, ಇದರಿಂದ ಅವರು ತಮ್ಮನ್ನು ಕಾಡುತ್ತಿದ್ದ ಪರಿಸ್ಥಿಯ ಕೈಗೊಂಬೆಯಾಗದೆ ತಮ್ಮ ತೊಂದರೆಗಳ ಬಗೆಗೆ ತರ್ಕಬದ್ಧವಾದ ದೃಷ್ಟಿಯನ್ನು ತಳೆಯಬಹುದು. ಸಂಮೋಹಿನಿ ಸ್ಥಿತಿಯಲ್ಲಿ ಅವರು ಕನಿಷ್ಠ ತಮ್ಮ ಅಂತರಂಗದ ಭಾವನೆಗಳನ್ನು ಮುಕ್ತವಾಗಿ ಹಾಗೂ ನಿರ್ಭಯವಾಗಿ ಚರ್ಚಿಸಲು ಸಾಧ್ಯವಾಗುವುದು.

ಮಕ್ಕಳಲ್ಲಿ ಅಶಾಂತಿಗೆ ಸಾಮಾನ್ಯ ಕಾರಣಗಳಲ್ಲೊಂದು ಅವರ ತಾಯಿ ತಂದೆಯರೊಂದಿಗೆ ಬಿಗಡಾಯಿಸಿದ ಸಂಬಂಧ. ಮಗು ಎಡವಿಬಿದ್ದಾಗ ತಮ್ಮ ಭಾವನೆಗಳನ್ನು ಅದುಮಿಟ್ಟುಕೊಳ್ಳಲು ಅವರು ಎಲ್ಲ ಪ್ರಯತ್ನ ಮಾಡಿದರೂ ಮನೆಯ ಉದ್ರಿಕ್ತ ವಾತಾವರಣದಿಂದಾಗಿ ಐದು ವರ್ಷಗಳೊಳಗಿನ ಮಗುವಿಗೂ ಶಾಂತಿ ಭಂಗವಾಗುವ ಸಾಧ್ಯತೆಯಿದೆ. ಒಂದು ಮಗು ಜಗಳ ಅಥವಾ ದೈಹಿಕ ಹಿಂಸೆಯನ್ನು ಪ್ರತ್ಯಕ್ಷ ಕಂಡಾಗ ಅದರ ಮನಸ್ಸಿನಲ್ಲಿ ಭೀತಿ, ಕಾತರ, ಅಭದ್ರತೆಯ ಭಾವನೆ ಬೆಳೆಯುವುದು. ಅಂಥ ಸಂದರ್ಭದಲ್ಲಿ ತಾಯಿ ತಂದೆಯವರಿಗೆ ಅಪಾಯದ ಸುಳಿವನ್ನು ನೀಡಬೇಕು, ಮತ್ತು ಸಾಧ್ಯವಾದರೆ ಮಗುವಿಗೆ ಪರಿಸ್ಥಿತಿಯನ್ನು ಪೂರ್ಣವಾಗಿ ತಿಳಿಸುವಂತೆ ಅವರ ಮನ ಒಲಿಸಬೇಕು.

ಒಬ್ಬ ದಂಪತಿಗೆ ಒಂದೇ ಒಂದು ಮಗು ಅದೂ ಹೆಣ್ಣು. ಬಹಳ ಬುದ್ಧಿವಂತೆಯಾದ 11ವರ್ಷದ ಹೆಣ್ಣು ಮಗಳ ಬಗೆಗೆ ಪತಿಗೆ ವಿಪರೀತವಾದ ಅಕ್ಕರೆ. ಆತನ ಉದ್ಯೋಗದ ಕಾರಣವಾಗಿ ಆತ ಹೆಚ್ಚು ಸಮಯ ಮನೆಯಿಂದ ಹೊರಗಿರುತ್ತಿದ್ದ. ಆದರೂ ಪ್ರತಿವಾರ ಮನೆಗೆ ಬಂದು ಮಗಳೊಂದಿಗೆ ಸಂತೋಷವಾಗಿ ಕಾಲ ಕಳೆಯಲು ಪ್ರಯತ್ನಿಸುತ್ತಿದ್ದ. ದುರದೃಷ್ಟವಶಾತ್ ಆತನಿಗೆ ತನ್ನ ಆಫೀಸಿನ ಹತ್ತಿರ ಒಬ್ಬ ಪ್ರೇಯಸಿ ಇದ್ದಳು. ತಂದೆಗೆ ಎರಡನೆಯ ಹೆಂಡತಿ ಇರುವುದು ಹೇಗೋ ಮಗಳಿಗೆ ತಿಳಿಯಿತು. ತಾಯಿಗೂ ಈ ಬಗೆಗೆ ಬಹಳ ಬೇಜಾರಾಯಿತು. ಆದರೂ ಮಗಳಿಗಾಗಿ ಆಕೆ ಗಂಡನೊಂದಿಗೆ ಜಗಳವಾಡದೆ ಇರಲು ಸಾಧ್ಯವಾದಮಟ್ಟಿಗೆ ಪ್ರಯತ್ನಿಸಿದಳು. ಕ್ರಮೇಣ ಆಕೆ ಈ ದುರದೃಷ್ಟಕರ ಪರಿಸ್ಥಿತಿಗೆ ಹೊಂದಿಕೊಂಡಳು. ಆದರೆ ಮಗಳ ಮನಸ್ಸು ಇದರಿಂದ ಕ್ಷೋಭೆಗೊಂಡಿತ್ತು. ನಿಧಾನವಾಗಿ ಅವಳಲ್ಲಿ ಕಳ್ಳತನ, ಶಾಲೆಗೆ ಗೈರುಹಾಜರಿ, ತರಗತಿಯ ಸಹಪಾಠಿಗಳೊಂದಿಗೆ ಕಾರಣವಿಲ್ಲದೆಯೇ ಜಗಳ ಮುಂತಾದ ಅಸಹಜ ನಡೆವಳಿಕೆಗಳು ತಲೆದೋರಿದವು. ಸದಾ ಉಗುರುಕಚ್ಚುವ ದುರಾಭ್ಯಾಸವೂ ಅವಳಲ್ಲಿ ಬೆಳೆಯಿತು. ವಾರ್ಷಿಕ ಪರೀಕ್ಷೆಯಲ್ಲಿ ಅವಳು ಸಿಕ್ಕಿಬಿದ್ದಾಗ ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಒಂದು ಚೂರು ಕಾಗದ ಇಟ್ಟುಕೊಂಡು ಅವಳು ಕಾಪಿ ಮಾಡುತ್ತಿದ್ದಳು. ಅವಳ ಶಿಕ್ಷಕಿಗೆ ಆಶ್ಚರ್ಯವಾಯಿತು.

ಇಂಥ ಸಂದರ್ಭಗಳಲ್ಲಿ ಇತ್ತೀಚಿನ ಹಾಗೂ ಹಳೆಯ ಶಾಲಾ ವರದಿಗಳನ್ನು ಪರಿಶೀಲಿಸುವುದು ಅಗತ್ಯ. ಹುಡುಗಿ ದಿನದಿನಕ್ಕೆ ಹೆಚ್ಚು ಉದ್ವಿಗ್ನಳಾಗುತ್ತ ಬಂದಳು. ಆಕೆಗೆ ಗಮನ ಕೇಂದ್ರೀಕರಿಸಲು ಸಾಧ್ಯವಾಗುತ್ತಿರಲಿಲ್ಲ, ದಿನವಿಡೀ ಚಡಪಡಿಸುತ್ತಿದ್ದಳು. ಇದಕ್ಕೆ ಕಾರಣವೇನೆಂದು ಮೇಲಿಂದ ಮೇಲೆ ಕೇಳಿದರೆ - "ಡ್ಯಾಡೀ ನಮ್ಮಿಂದ ದೂರ ಹೊರಟು ಹೋಗುತ್ತಾರೆ. ನನ್ನನ್ನು ಮತ್ತು ಮಮ್ಮಿಯನ್ನು ಏಕಾಂಗಿಯಾಗಿ ಬಿಟ್ಟುಹೋಗುತ್ತಾರೆ" ಎನ್ನುತ್ತಿದ್ದಳು.

ಆ ಹುಡುಗಿಯನ್ನು ಅವಳ ತಾಯಿ ನನ್ನ ಕ್ಲಿನಿಕ್‌ಗೆ ಕರೆತಂದರು. `ತಾಯಿಯೊಂದಿಗೆ ಮುಚ್ಚುಮರೆಯಿಲ್ಲದೆ ಚರ್ಚಿಸಲಾಯಿತು. ಹುಡುಗಿಯೂ ನನ್ನಲ್ಲಿ ಸಂಪೂರ್ಣ ವಿಶ್ವಾಸ ವ್ಯಕ್ತಪಡಿಸಿದಳು. ಹಾಗೂ `ಟ್ರಾನ್ಸ್' (ವಶ್ಯಸ್ವಪ್ನ) ಸ್ಥಿತಿಯನ್ನು ತಲುಪುವುದನ್ನು ಬೇಗ ಕಲಿತುಕೊಂಡಳು. ಒಬ್ಬಳೇ ಇದ್ದಾಗ ಅದನ್ನು ಅಭ್ಯಾಸ ಮಾಡುತ್ತಿದ್ದಳು. ರಿಲ್ಯಾಕ್ಸ್ ಮಾಡಲು ಇಚ್ಛಿಸಿದಳು. ಅದರಿಂದ ಒಳ್ಳೆಯ ಹಾಗೂ ತಡೆಯಿಲ್ಲದ ನಿದ್ರೆ ಸಾಧ್ಯವೆಂದು ಕಂಡುಕೊಂಡಳು. ಬುದ್ಧಿಶಾಲಿ ತಾರುಣ್ಯಪೂರ್ವದ ಹುಡುಗಿಯ ಒಳನೋಟವನ್ನೂ ಅವಳು ವ್ಯಕ್ತಪಡಿಸಿದಳು. ಸಾಮಾನ್ಯ ಸಂಭಾಷಣೆಯಲ್ಲಿ ಕಾರಣಕ್ಕೆ ಬದಲಾಗಿ ಭಾವೋದ್ರೇಕಗಳಿಗೆ ಒಳಗಾಗುತ್ತಿದ್ದ ಆ ಹುಡುಗಿ ಸಂಮೋಹಿನಿ ಸ್ಥಿತಿಯಲ್ಲಿ ಇತರರೊಂದಿಗೆ ಸಂಬಂಧಿಸಿದಂತೆ ತನ್ನ ಬಗೆಗೆ ವಸ್ತುನಿಷ್ಠವಾಗಿ ಹಾಗೂ ಸ್ಪಷ್ಟವಾಗಿ ಯೋಚಿಸುತ್ತಿದ್ದಳು. ಒಂದು ಮುಖ್ಯ ವಿಷಯವೆಂದರೆ ಚಿಕಿತ್ಸೆಗೆ ಸಂಬಂಧಿಸಿದಂತೆ ಬಾಂಧವ್ಯ ಚೆನ್ನಾಗಿತ್ತು ಹಾಗೂ ಮತ್ತಷ್ಟು ಬಲಿಷ್ಠವಾಯಿತು. ಮತ್ತು ಆಕೆ ನನ್ನ ಬಗೆಗೆ ಅಪಾರ ವಿಶ್ವಾಸ ಬೆಳೆಸಿಕೊಂಡಳು. ಇದರಿಂದ ವಿವಿಧ ವಿಷಯಗಳ ಬಗೆಗೆ ಆಕೆಗೆ ಮುಕ್ತವಾಗಿ ಮಾತನಾಡಲು ಸಾಧ್ಯವಾಯಿತು. ಯಾರೊಂದಿಗೂ ತನ್ನ ವಿಷಯವನ್ನು ಎಂದಿಗೂ ಹೇಳಲಾರಳು ಎಂದು ಅವಳು ಭಾವಿಸಿದ್ದಳು. ಅಂಥ ಒಂದು ವಿಷಯ ತನ್ನ ತಂದೆಯೊಂದಿಗೇ ತನ್ನ ಮದುವೆ ಆಗಬೇಕೆಂದು ಆಶಿಸಿದ್ದಳು.

ಅವಳ ಮನಸ್ಸಿನಲ್ಲಿ ಸುಪ್ತವಾಗಿದ್ದ ವಿಕೃತ ಇಚ್ಛೆಯು ಈ ರೀತಿ ಹೊರಬಂದಿತು.

ಆದರೆ ಸಂಮೋಹಿನಿ ಸ್ಥಿತಿಯಲ್ಲಿ ಅವಳ ಮನಸ್ಸಿನ ಅನಿಸಿಕೆಗಳು ಸ್ವಲ್ಪ ಸಂಯಮದಿಂದ ಹೊರಬರಲಾರಂಭಿಸಿದವು. ತನ್ನ ತಂದೆಯ ಬಗೆಗೆ ಟೀಕೆಯ ಅಭಿಪ್ರಾಯಗಳನ್ನು ಅವಳು ವ್ಯಕ್ತಪಡಿಸಲಾರಂಭಿಸಿದಳು. ತನ್ನ ತಂದೆಯೊಂದಿಗೆ ತನ್ನ ತಾಯಿ ಕಷ್ಟಗಳನ್ನು ಎದುರಿಸುತ್ತಿರುವರೆಂದು ಅರ್ಥಮಾಡಿಕೊಳ್ಳಲಾರಂಭಿಸಿದಳು. ಮುಂಚೆಯಾದರೆ ತನ್ನ ತಾಯಿಯದೇ ತಪ್ಪು. ಆದ್ದರಿಂದಲೇ ತಂದೆ ಮನೆಯಲ್ಲಿ ಇರುತ್ತಿರಲಿಲ್ಲ ಎಂದು ಭಾವಿಸಿದ್ದಳು. ಆದರೆ ಈಗ ನಿರ್ಲಕ್ಷ್ಯದಿಂದಾಗಿ ಈ ಎಲ್ಲ ತೊಂದರೆಗಳು ಉಂಟಾಗಿವೆ ಎಂಬುದನ್ನು ಕಂಡುಕೊಳ್ಳಲಾರಂಭಿಸಿದಳು.

ಹದಿನೈದು ದಿನಗಳಿಗೊಮ್ಮೆಯಂತೆ ಮಾತ್ರ ಚಿಕಿತ್ಸೆಯ ಅಧಿವೇಶನಗಳು ನಡೆದವು. ಏಕೆಂದರೆ ಅವಳಿಗೆ ಸ್ಕೂಲ್‌ನಿಂದ ದೂರವಾಗಿರಲು ಕಷ್ಟವಾಗುತ್ತಿತ್ತು. ಎಂಟು ತಿಂಗಳ ಕಾಲ ಚಿಕಿತ್ಸೆ ನಡೆಯಿತು, ಈ ಅವಧಿಯಲ್ಲಿ ಬಹಳಷ್ಟು ಸುಧಾರಿಸಿದಳು. ಸ್ಕೂಲ್‌ನಲ್ಲೂ ಅವಳ ಕಾರ್ಯನಿರ್ವಹಣೆ ಗಮನಾರ್ಹವಾಗಿ ಸುಧಾರಿಸಿತು. ವಿದ್ಯಾಭ್ಯಾಸದಲ್ಲಿ ಅವಳಿಗೆ ಆಸಕ್ತಿ ಮೂಡಿತು. ಯಾವುದೇ ಬಗೆಯ ಅಪ್ರಾಮಾಣಿಕತೆ ಮತ್ತೆ ತಲೆದೋರಲಿಲ್ಲ. ಎಲ್ಲ ದೃಷ್ಟಿಗಳಿಂದಲೂ ಅವಳು ಈಗ ಸುಖಿ ಹಾಗೂ ಚೆನ್ನಾಗಿ ಹೊಂದಿಕೊಂಡಿದ್ದಳು.

### ಉಪಸಂಹಾರ

ಮೇಲ್ಕಂಡ ತರಹದ ತೊಂದರೆಗೆ ಸಾಂಪ್ರದಾಯಿಕ ಚಿಕಿತ್ಸೆಯ ಅವಧಿಯಲ್ಲಿ, ಕೆಲ ಸಮಯಗಳಲ್ಲಿ ಮನೆ ಹಾಗೂ ಸ್ಕೂಲ್‌ನಲ್ಲಿ ಸಹ ಮಗುವನ್ನು ಸುಧಾರಿಸುವುದು ಕಷ್ಟವಾಗುವುದು, ಆದರೆ ಸಂಮೋಹಿನಿ ಚಿಕಿತ್ಸೆಯಲ್ಲಿ ಅಂಥ ಯಾವುದೇ ತೊಂದರೆ ಸಂಭವಿಸುವುದಿಲ್ಲ.

ಹಾಸಿಗೆ ಒದ್ದೆಮಾಡಿಕೊಳ್ಳುವುದು, ಬೆರಳು ಚೀಪುವುದು, ಉಗುರು ಕಚ್ಚುವುದು, ಅನಗತ್ಯವಾಗಿ ಕಣ್ಣುಗಳನ್ನು ಮಿಟುಕಿಸುವುದು, ಭುಜಗಳನ್ನು ಅಸಹ್ಯವಾಗಿ ಕುಣಿಸುವುದು ಮುಂತಾದವು ಸಾಮಾನ್ಯವಾಗಿ ಮಕ್ಕಳಲ್ಲಿ ಕಂಡು ಬರುವ ವರ್ತನೆಗೆ ಸಂಬಂಧಿಸಿದ ತೊಂದರೆಗಳು. ಈ ಎಲ್ಲಕ್ಕೂ ಸಂಮೋಹಿನಿ ಚಿಕಿತ್ಸೆಯನ್ನು ಯಾವಾಗಲೂ ಶಿಫಾರಸು ಮಾಡಲಾಗುತ್ತದೆ. (ಹಾಸಿಗೆ ಒದ್ದೆ ಮಾಡಿಕೊಳ್ಳುವ ಸಮಸ್ಯೆಯ ಬಗೆಗೆ ಮುಂಚಿನ ಲೇಖನದಲ್ಲಿ ಸಾಕಷ್ಟು ಚರ್ಚಿಸಲಾಗಿದೆ).